# ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964

ವಿಷಯಾನುಕ್ರಮಣಿಕೆ

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಗಳು:**

ಪ್ರಕರಣಗಳು:


**ಅಧ್ಯಾಯ I**

**ಪ್ರಾರಂಭ**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.

2. ಪರಿಭಾಷೆ.

**ಅಧ್ಯಾಯ II**

**ಅಗ್ನಿಶಾಮಕ ದಳದ ನಿರ್ವಹಣೆ**

3. ಅಗ್ನಿಶಾಮಕ ದಳವನ್ನು ಇಟ್ಟುಕೊಂಡು ಬರುವುದು.

4. ಅಗ್ನಿಶಾಮಕ ದಳದ ನಿರ್ದೇಶಕನ ನೇಮಕಾತಿ.

5. ದಳದ ಅಧೀಕ್ಷಣೆ ಮತ್ತು ನಿಯಂತ್ರಣ.

6. ದಳದ ಸದಸ್ಯರ ನೇಮಕಾತಿ.

7. ದಳದ ಸದಸ್ಯರಿಗೆ ಪ್ರಮಾಣ ಪತ್ರವನ್ನು ಕೊಡುವುದು.

8. ಸಹಾಯಕ ಅಗ್ನಿಶಾಮಕ ದಳ.

**ಅಧ್ಯಾಯ III**

**ರಾಜ್ಯಸರ್ಕಾರ, ದಳದ ನಿರ್ದೇಶಕ ಮತ್ತು ಸದಸ್ಯರ ಅಧಿಕಾರಗಳು**

9. ವಿನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.

10. ಬೆಂಕಿ ಸಂಭವಿಸಿದಲ್ಲಿ ದಳದ ಸದಸ್ಯರ ಅಧಿಕಾರಗಳು.

11. ನೀರಿನ ಸರಬರಾಜಿಗಾಗಿ ಏರ್ಪಾಡುಗಳನ್ನು ಮಾಡಿಕೊಳ್ಳಲು ನಿರ್ದೇಶಕನ ಅಧಿಕಾರಿ.

12. ಸಹಾಯಕ್ಕಾಗಿ ಏರ್ಪಾಡುಗಳನ್ನು ಮಾಡಿಕೊಳ್ಳಲು ನಿರ್ದೇಶಕನ ಅಧಿಕಾರಿ.

13. ಪ್ರತಿಬಂಧಕ ಕ್ರಮಗಳು.

## ಅಧ್ಯಾಯ IV

## ದಳವನ್ನು ಇಟ್ಟುಕೊಳ್ಳುವುದರ ಮೇಲಿನ ವೆಚ್ಚ

14. ದಳದ ಮೇಲಿನ ವೆಚ್ಚ .
15. ಬೆಂಕಿ ತೆರಿಗೆಯನ್ನು ವಿಧಿಸುವುದು.
16. ಬೆಂಕಿ ತೆರಿಗೆ ನಿರ್ಧರಣೆ, ಸಂಗ್ರಹಣೆ ಇತ್ಯಾದಿಗಳ ವಿಧಾನ.
17. ಫೀಜುಗಳು.

## ಅಧ್ಯಾಯ V

## ಸ್ಥಳೀಯ ಪ್ರಾಧಿಕಾರದ ಅಗ್ನಿಶಾಮಕ ದಳದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ

18. ಸ್ಥಳೀಯ ಪ್ರಾಧಿಕಾರದ ಅಗ್ನಿಶಾಮಕ ಸೇವೆಯ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.
19. ಭವಿಷ್ಯ ಸೇವಾ ನಿವೃತ್ತಿ ಮತ್ತು ಇತರ ಅಂಥಹುದೇ ನಿಧಿಗಳು.
20. ಸ್ಥಳೀಯ ಪ್ರಾಧಿಕಾರದ ಅಗ್ನಿಶಾಮಕ ಸೇವೆಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವರ್ಗಾವಣೆಯ ಸಾಮಾನ್ಯ ಪರಿಣಾಮ.
21. ಸ್ಥಳೀಯ ಪ್ರಾಧಿಕಾರದ ನಿಯೋಜಿತರ ಸೇವೆಯ ವರ್ಗಾವಣೆ.
22. ಸ್ವತ್ತು ಮತ್ತು ಅದಕ್ಕೆ ಸಂಬAಧಿಸಿದ ದಸ್ತಾವೇಜುಗಳ ಸ್ವಾಧೀನವನ್ನು ವಶಾವಣೆ ಮಾಡಲು ಕರ್ತವ್ಯ.

## ಅಧ್ಯಾಯ VI

## ದಂಡನೆಗಳು

23. ಕರ್ತವ್ಯದ ಉಲ್ಲಂಘನೆಗಾಗಿ ದಂಡನೆ ಇತ್ಯಾದಿ.
24. ಮಾಹಿತಿಯನ್ನು ಕೊಡಲು ತಪ್ಪುವುದು.
25. ಮುನ್ನೆಚ್ಚರಿಕೆ ತೆಗೆದುಕೊಳ್ಳಲು ತಪ್ಪುವುದು.
26. ಅಗ್ನಿಶಾಮಕ ಕಾರ್ಯಾಚರಣೆಗಳಿಗೆ ಬುದ್ಧಿಪೂರ್ವಕವಾಗಿ ಅಡ್ಡಿಯನ್ನುಂಟು ಮಾಡುವುದು.
27. ಸುಳ್ಳು ವರದಿ.

## ಅಧ್ಯಾಯ VII

## ಸಾಮಾನ್ಯ ಮತ್ತು ಸಂಕೀರ್ಣ

28. ಇತರ ನಿಯೋಜನೆಗೆ ಪ್ರತಿಷೇಧ.

29. ಇತರ ಪ್ರದೇಶಕ್ಕೆ ವರ್ಗಾವಣೆ.

30. ಇತರ ಕರ್ತವ್ಯಗಳ ಮೇಲೆ ನಿಯೋಜನೆ.

31. ನಷ್ಟಪರಿಹಾರವನ್ನು ಸಂದಾಯ ಮಾಡಲು ಸ್ವತ್ತಿನ ಒಡೆಯ ಹೊಣೆಗಾರಿಕೆ.

32. ಮಾಹಿತಿಯನ್ನು ಪಡೆಯಲು ಅಧಿಕಾರ.

33. ಪ್ರವೇಶಾಧಿಕಾರಿ.

34. ನೀರಿನ ಬಳಕೆ.

35. ನೀರು ಸರಬರಾಜಿನ ತಡೆಗಾಗಿ ಯಾವುದೇ ನಷ್ಟ ಪರಿಹಾರವಿಲ್ಲ.

36. ಪೋಲಿಸು ಅಧಿಕಾರಿಗಳು ನೆರವು ನೀಡಬೇಕು.

37. ಬೆಂಕಿ ತಲೆದೋರಿದ ಮೇಲೆ ಮಾಹಿತಿ.

38. ದಂಡ ರಕ್ಷಣೆ.

39. ನಿಯಮ ರಚನಾಧಿಕಾರ.

40. ನಿರಸನ ಮತ್ತು ಉಳಿಸುವಿಕೆ.

*****

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಗಳು

**I**

**1964 ರ ಅಧಿನಿಯಮ 42.-** ರಾಜ್ಯದಲ್ಲಿನ ಅಗ್ನಿಶಾಮಕ ಠಾಣೆಗಳು ಪ್ರಸ್ತುತ ಪೊಲೀಸ್ ಮತ್ತು ಸ್ಥಳೀಯ ಸಂಸ್ಥೆಗಳ ನಿರ್ವಹಣೆಯ ಅಡಿಯಲ್ಲಿವೆ ಮತ್ತು ಅವುಗಳ ಕರ್ತವ್ಯಗಳು ಹಾಗೂ ಜವಾಬ್ದಾರಿಗಳನ್ನು ಯಾವುದೇ ಕಾನೂನಿನ ಮೂಲಕ ನಿರ್ವಹಿಸಲಾಗುತ್ತಿಲ್ಲ.

ಕೈಗಾರಿಕೆಗಳ ಅಭಿವೃದ್ಧಿ ಮತ್ತು ಹೆಚ್ಚುತ್ತಿರುವ ಸಂಕೀರ್ಣಮಯ ಆಧುನಿಕ ನಾಗರಿಕ ಜೀವನವು ರಾಜ್ಯದಲ್ಲಿ ಒಂದು ಏಕರೂಪದ ಮಾನದಂಡದ ಮೇಲೆ ಅಗ್ನಿಶಾಮಕ ಸೇವೆಗಳ ವಿಸ್ತರಣೆ ಮತ್ತು ಮರು ಸಂಘಟಿಸುವುದನ್ನು ಹಾಗೂ ಒಂದು ಸಮಗ್ರ ಅಗ್ನಿಶಾಮಕದಳ ಸಂಹಿತೆ ರೂಪಿಸುವುದನ್ನು ಅಗತ್ಯಪಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಈ ವಿಧೇಯಕವು,-

(1) ಈ ಕಾನೂನು ಜಾರಿಗೆ ಬಂದ ದಿನಾಂಕದಿಂದ ರಾಜ್ಯಸರ್ಕಾರದ ಸ್ಥಳೀಯ ಸಂಸ್ಥೆಗಳ ನಿರ್ವಹಣೆಯ ಅಡಿಯಲ್ಲಿ ಅಗ್ನಿಶಾಮಕ ಸೇವೆಗಳು ಹಾಗೂ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಸಿಬ್ಬಂದಿಯನ್ನು ಕೂಡಲೇ ವರ್ಗಾಯಿಸುವುದಕ್ಕಾಗಿ;

(2) ಯಾವುದೇ ಸಾರ್ವಜನಿಕ ಅಥವಾ ಖಾಸಗಿ ನೀರಿನ ಮೂಲದಿಂದ ನೀರನ್ನು ಬಳಸಲು ಹಾಗೂ ಪ್ರಮುಖ ನೀರು ಸರಬರಾಜಿನಿಂದ ಹಾಗೆ ನೀರನ್ನು ಒದಗಿಸುವುದನ್ನು ನಿಯಂತ್ರಿಸುವ ಪ್ರದೇಶದಲ್ಲಿ ಬಾಧ್ಯತೆಯನ್ನು ವಹಿಸುವುದಕ್ಕಾಗಿ;

(3) ಅಗ್ನಿ ಅವಘಡದ ಸಂಭವವಿರುವ ಯಾವುದೇ ಪ್ರದೇಶದಲ್ಲಿನ ಆವರಣಗಳು ಅಥವಾ ಯಾವುದೇ ವರ್ಗದ ಆವರಣಗಳ ಮಾಲೀಕರು ಅಥವಾ ಅನುಭೋಗದಾರರಿಗೆ ಸೂಕ್ತ ಮುನ್ನೆಚ್ಚರಿಕೆ ತೆಗೆದುಕೊಳ್ಳುವುದನ್ನು ಅಗತ್ಯಪಡಿಸುವುದಕ್ಕಾಗಿ;

(4) ಯಾವುದೇ ಪ್ರದೇಶದ ಯಾವುದೇ ಸ್ಥಳೀಯ ಪ್ರಾಧಿಕಾರದಿಂದ ಆ ಪ್ರದೇಶದಲ್ಲಿ ಅಗ್ನಿಶಾಮಕ ದಳದ ಭಾಗವು ನಿರ್ವಹಿಸಿದ ಅಂಥ ಕೊಡುಗೆಯ ಬಗೆಗಿನ ವೆಚ್ಚವನ್ನು ಸರ್ಕಾರವು ನಿಗದಿಪಡಿಸಬಹುದಾದಂತೆ ವಸೂಲು ಮಾಡುವುದಕ್ಕಾಗಿ;

(5) ಜಮೀನುಗಳ ಅಥವಾ ಕಟ್ಟಡಗಳ ಮೇಲೆ ಅಗ್ನಿಶಾಮಕ ತೆರಿಗೆ ಎಂಬುದಾಗಿ ಮೇಲ್ತೆರಿಗೆಯನ್ನು ಆಸ್ತಿ ತೆರಿಗೆಯ ಮೇಲೆ ಶೇಕಡ 10ಕ್ಕೆ ಮೀರದ ದರದಲ್ಲಿ ಉಪಕರವನ್ನು ವಿಧಿಸುವುದಕ್ಕಾಗಿ,

- ಉಪಬಂಧಿಸುವುದು.

(ಕರ್ನಾಟಕ ರಾಜ್ಯ ಪತ್ರ ಭಾಗ-IV-2ಎರ ಪುಟ 384ರಲ್ಲಿ ದಿನಾಂಕ: 26ನೇ ಜುಲೈ 1964ರಂದು ಪ್ರಕಟಿಸಲಾಗಿದೆ.)

II

**1994ರ ತಿದ್ದುಪಡಿ ಅಧಿನಿಯಮ 40.-** ಅಗ್ನಿ ಶಾಮಕದಳವು ತುರ್ತು ಮತ್ತು ಅಗತ್ಯ ಸೇವೆಯಾಗಿದೆ. ಆದ್ದರಿಂದ ಇದು , ಅಗ್ನಿ ಶಾಮಕದಳದ ಸದಸ್ಯರ ಸೇವೆಗಳು ಜನ ಸಾಮಾನ್ಯರಿಗೆ ನಿರಂತರವಾಗಿ ಲಭ್ಯವಿರತಕ್ಕದ್ದು ಅತ್ಯವಶ್ಯಕ.

ಕರ್ನಾಟಕ ಪೊಲೀಸು ಅಧಿನಿಯಮ, 1964ರ 123ನೇ ಪ್ರಕರಣವು ಪೊಲೀಸು ಬಲದ ಸದಸ್ಯರು ಸರ್ಕಾರದ ಬಗ್ಗೆ ಉದ್ದೇಶಪೂರ್ವಕಾಗಿ ದ್ರೋಹವುಂಟುಮಾಡಿದರೆ, ಉಂಟು ಮಾಡಲು ಯತ್ನಿಸಿದರೆ ಅಥವಾ ಹಾಗೆ ದ್ರೋಹ ಉಂಟುಮಾಡುವ ಸಂಭವವಿರುವುದೆಂದು ತಾನೂ ತಿಳಿದೂ ಕೃತ್ಯವನ್ನು ಮಾಡಿದರೆ ದಂಡನೆಯನ್ನು ಉಪಬಂಧಿಸಲಾಗಿದೆ. ಕರ್ನಾಟಕ ಅಗ್ನಿ ಶಾಮಕದಳ ಅಧಿನಿಯಮ, 1964ರಲಿ ಅಂಥ ಉಪಬಂಧವು ಕಂಡುಬರುವುದಿಲ್ಲ. ಆದ್ದರಿಂದ ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮವು ಸಾದೃಶ್ಯ ಉಪಬಂಧವನ್ನು ಹೊಂದುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1992ರ ವಿ.ಸ. ವಿಧೇಯಕ ಸಂ.21 ರಿಂದ ಸ್ವೀಕರಿಸಲಾಗಿದೆ)

III

**2023ರ ತಿದ್ದುಪಡಿ ಅಧಿನಿಯಮ 24.-** ಅಗ್ನಿಶಾಮಕ ಮತ್ತು ಜೀವಸುರಕ್ಷತೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಕಟ್ಟಡ ಸಂಹಿತೆ, 2016ರ ಉಪಬಂಧಗಳಿಗೆ ಒಳಪಟ್ಟು ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯಿಂದ ಎತ್ತರದ ಕಟ್ಟಡ ನಿರ್ಮಾಣಕ್ಕಾಗಿ ನಿರಾಕ್ಷೇಪಣಾ ಪತ್ರವನ್ನು ಪಡೆಯುವುದಕ್ಕೆ ಉಪಬಂಧವನ್ನು ಕಲ್ಪಿಸಲು ಕರ್ನಾಟಕ ಅಗ್ನಿಶಾಮಕದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42)ನ್ನು ಮತ್ತಷ್ಟು ತಿದ್ದುಪಡಿಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧ್ಯಾದೇಶ, 2023 (2023ರ ಕರ್ನಾಟಕ ಅಧ್ಯಾದೇಶ ಸಂ. 01)ನ್ನು ದಿನಾಂಕ:24.03.2023ರಂದು ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2023ರ ವಿಧಾನ ಸಭೆ ವಿಧೇಯಕ ಸಂ. 03, ಕಡತ ಸಂ. ಸಂವ್ಯಶಾಇ 12 ಶಾಸನ 2023]
[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 2 ಮತ್ತು 41ನೇ ನಮೂದು]
[ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ-IVಎರಲ್ಲಿನ ಸಂ.340ರಲ್ಲಿ ದಿನಾಂಕ: 27.07.2023ರಂದು ಪ್ರಕಟಿಸಲಾಗಿದೆ]

**IV**

**2025ರ ಅಧಿನಿಯಮ ಸಂಖ್ಯೆ: 59** 2024-2025ನೇ ವರ್ಷದ ಆಯವ್ಯಯ ಭಾಷಣದ ಖಂಡಿಕೆ 441ರಲ್ಲಿ ಮಾಡಲಾದ ಪ್ರಸ್ತಾವನೆಗಳನ್ನು ಜಾರಿಗೊಳಿಸಲು ಮತ್ತು ಹೊಸದಾಗಿ ನಿರ್ಮಾಣಗೊಂಡಿರುವ ಬಹುಮಹಡಿ ಕಟ್ಟಡಗಳ ಸ್ವತ್ತು ತೆರಿಗೆಯ ಮೇಲೆ ಶೇಕಡಾ ಒಂದರಷ್ಟು ಬೆಂಕಿ ಉಪಕರವನ್ನು ವಿಧಿಸುವ ಮೂಲಕ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42)ರ 15ನೇ ಪ್ರಕರಣವನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

ಆದ್ದರಿಂದ ಈ ವಿಧೇಯಕ.

[2025ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 42, ಕಡತ ಸಂಖ್ಯೆ:ಸಂವ್ಯಶಾಇ 48 ಶಾಸನ 2025]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 2 ಮತ್ತು 49ನೇ ನಮೂದನೆಯಡಿ ಬರುತ್ತದೆ.]
[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:567, ದಿನಾಂಕ:10.09.2025ರಲ್ಲಿ ಪ್ರಕಟಗೊಂಡಿದೆ]

*****

## ಕರ್ನಾಟಕ ಸರ್ಕಾರ

## [1][ಕರ್ನಾಟಕ][1] ಅಧಿನಿಯಮ 1964ರ ಸಂಖ್ಯೆ 42

(ಕರ್ನಾಟಕ ರಾಜ್ಯ ಪತ್ರದಲ್ಲಿ 1964ರ ನವಂಬರಿನ ಹನ್ನೆರಡನೇ ದಿನಾಂಕದಂದು ಮೊದಲು ಪ್ರಕಟಿಸಲಾಗಿದೆ)

# [1][ಕರ್ನಾಟಕ][1] ಅಗ್ನಿಶಾಮಕ ದಳ ಅಧಿನಿಯಮ, 1964

(1964ರ ನವಂಬರ್ ಐದನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿ ಪಡೆಯಲಾಗಿದೆ)

(ಕರ್ನಾಟಕ ಅಧಿನಿಮಗಳು 1994ರ 40, 2023ರ 24 ಮತ್ತು 2025ರ 59 ರ ಮೂಲಕ ತಿದ್ದುಪಡಿ ಮಾಡಲಾದಂತೆ)

[1][ಕರ್ನಾಟಕ ರಾಜ್ಯ][1]ಕ್ಕಾಗಿ ಅಗ್ನಿಶಾಮಕ ದಳವನ್ನು ಇಟ್ಟುಕೊಂಡು ಬರುವುದಕ್ಕಾಗಿ ಉಪಬಂಧಿಸುವ ಅಧಿನಿಯಮ

[1][ಕರ್ನಾಟಕ ರಾಜ್ಯ][1]ಕ್ಕಾಗಿ ಅಗ್ನಿಶಾಮಕ ದಳವನನು ಇಟ್ಟುಕೊಂಡು ಬರುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನೈದನೆಯ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು,-

1. ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶ, 1973ರ ಮೂಲಕ 1.11.1973ರಂದು ಜಾರಿಗೆಬರುವಂತೆ ಅಳವಡಿಸಿಕೊಳ್ಳಲಾಗಿದೆ.

## ಅಧ್ಯಾಯ - I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಅಗ್ನಿಶಾಮಕದಳ ಅಧಿನಿಯಮ 1964 ಎಂದು ಕರೆಯತಕ್ಕದ್ದು.

1. ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶ, 1973ರ ಮೂಲಕ 1.11.1973ರಂದು ಜಾರಿಗೆಬರುವಂತೆ ಅಳವಡಿಸಿಕೊಳ್ಳಲಾಗಿದೆ.

(2) ಇದು ಇಡೀ [1][ಕರ್ನಾಟಕ][1]ಕ್ಕೆ ವ್ಯಾಪ್ತವಾಗುತ್ತದೆ.

1. ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶ, 1973ರ ಮೂಲಕ 1.11.1973ರಂದು ಜಾರಿಗೆಬರುವಂತೆ ಅಳವಡಿಸಿಕೊಳ್ಳಲಾಗಿದೆ.

(3) ಇದು, ರಾಜ್ಯಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1]ದಂದು ಯಾವುದೇ ಪ್ರದೇಶದಲ್ಲಿ ಜಾರಿಗೆ ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ಪ್ರದೇಶಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1. ಅಧಿನಿಯಮವು ವಿವಿಧ ಪ್ರದೇಶಗಳಲ್ಲಿ ವಿವಿಧ ಅಧಿಸೂಚನೆಗಳ ಮೂಲಕ ವಿವಿಧ ದಿನಾಂಕಗಳಿಂದ ಜಾರಿಗೆ ಬಂದಿದೆ. ಸಂಕ್ಷಿಪ್ತವಾಗಿ ಲಭ್ಯ ಅಧಿಸೂಚನೆಗಳು ಅಧಿನಿಯಮದ ಕೊನೆಯಲ್ಲಿದೆ.

**2. ಪರಿಭಾಷೆ.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ``ನಿರ್ದೇಶಕ'' ಎಂದರೆ 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ಅಗ್ನಿಶಾಮಕ ದಳದ ನಿರ್ದೇಶಕ ;

(ಬಿ) ``ಅಗ್ನಿಶಾಮಕ ಸ್ವತ್ತು" ಎಂಬುದು,-

(i) ಅಗ್ನಿಶಾಮಕ ಠಾಣೆಗಳಾಗಿ ಉಪಯೋಗಿಸಿದ ಭೂಮಿಗಳು ಮತ್ತು ಕಟ್ಟಡಗಳು;

(ii) ಅಗ್ನಿಶಾಮಕ ಎಂಜಿನುಗಳು, ಸಾಧನ ಸಾಮಗ್ರಿಗಳು, ಉಪಕರಣಗಳು, ಕೆಲಸದ ಸಾಮಾನುಗಳು ಮತ್ತು ಅಗ್ನಿಶಮನಕ್ಕಾಗಿ ಉಪಯೋಗಿಸಿದ ಯಾವುದೇ ಆದ ವಸ್ತುಗಳು:

(iii) ಅಗ್ನಿಶಮನಕ್ಕೆ ಸಂಬಂಧಿಸಿದಂತೆ ಉಪಯೋಗಿಸಿದ ಮೋಟಾರು ವಾಹನಗಳು ಮತ್ತು ಇತರ ಸಾರಿಗೆ ಸಾಧನಗಳು; ಮತ್ತು

(iv) ಸಮವಸ್ತ್ರಗಳು ಮತ್ತು ದರ್ಜೆಯ ಬಿಲ್ಲೆಗಳು ಇವುಗಳನ್ನು ಒಳಗೊಳ್ಳುತ್ತದೆ.

(ಸಿ) ``ಅಗ್ನಿಶಾಮಕ ಠಾಣೆ'' ಎಂದರೆ ಅಗ್ನಿಶಾಮಕ ಠಾಣೆ ಎಂದು ರಾಜ್ಯ ಸರ್ಕಾರವು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಘೋಷಿಸಿದ ಯಾವುದೇ ಠಾಣೆ ಅಥವಾ ಸ್ಥಳ:

(ಡಿ) ''ದಳ" ಎಂದರೆ ಈ ಅಧಿನಿಯಮದ ಮೇರೆಗೆ ಇಟ್ಟಿರುವ [1][ಕರ್ನಾಟಕ][1] ಅಗ್ನಿ ಶಾಮಕ ದಳ;

(ಇ) ''ಅಗ್ನಿಶಾಮಕ ಠಾಣೆಯ ಪ್ರಬಾರದಲ್ಲಿರುವ ಅಧಿಕಾರಿ' ' ಎಂಬುದು ಅಗ್ನಿ ಶಾಮಕ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು ಆ ಠಾಣೆಯಿಂದ ಗೈರು ಹಾಜರು ಆಗಿರುವಾಗ ಅಥವಾ ಇತರ ಕಾರಣದಿಂದಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸಲು ಅಸಮರ್ಥನಾಗಿರುವಾಗ, ಅಂಥ ಅಧಿಕಾರಿಗೆ ದರ್ಜೆಯಲ್ಲಿ ನಿಕಟನಾದ ಆ ಠಾಣೆಯಲ್ಲಿ ಹಾಜರಿರುವ ಅಗ್ನಿಶಾಮಕ ಅಧಿಕಾರಿಯನ್ನು ಒಳಗೊಳ್ಳುತ್ತದೆ.

(ಎಫ್) ''ನಿಯಮಿಸಲಾದದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಿದುದು;

## ಅಧ್ಯಾಯ- II

## ಅಗ್ನಿಶಾಮಕ ದಳವನ್ನು ಇಟ್ಟುಕೊಂಡು ಬರುವುದು

**3. ಅಗ್ನಿಶಾಮಕ ದಳವನ್ನು ಇಟ್ಟುಕೊಂಡು ಬರುವುದು.-** ಈ ಅಧಿನಿಯಮವು ಜಾರಿಯಲ್ಲಿರುವಂಥ ಸ್ಥಳೀಯ ಪ್ರದೇಶಗಳಲ್ಲಿ, ಸೇವೆ ಸಲ್ಲಿಸುವುದಕ್ಕಾಗಿ [1][ಕರ್ನಾಟಕ][1] ಅಗ್ನಿಶಾಮಕ ದಳವೆಂದು ಕರೆಯಲಾಗುವ ಅಗ್ನಿಶಾಮಕದಳವನ್ನು ರಾಜ್ಯ ಸರ್ಕಾರವು ಇಟ್ಟುಕೊಂಡು ಬತರಕ್ಕುದು.

1. ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶ, 1973ರ ಮೂಲಕ 1.11.1973ರಂದು ಜಾರಿಗೆಬರುವಂತೆ ಅಳವಡಿಸಿಕೊಳ್ಳಲಾಗಿದೆ.

**4. ಅಗ್ನಿಶಾಮಕ ದಳದ ನಿರ್ದೇಶಕನ ನೇಮಕಾತಿ.–** ರಾಜ್ಯ ಸರ್ಕಾರವು ಒಬ್ಬ ವ್ಯಕ್ತಿಯನ್ನು ಅಗ್ನಿಶಾಮಕ ದಳದ ನಿರ್ದೇಶನಕನೆಂದು ನೇಮಕ ಮಾಡತಕ್ಕದ್ದು.

**5. ದಳದ ಅಧೀಕ್ಷಣೆ ಮತ್ತು ನಿಯಂತ್ರಣ.-** (1) ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟು, ದಳದ ಅಧೀಕ್ಷಣೆ ಮತ್ತು ನಿಯಂತ್ರಣವು, ನಿರ್ದೇಶಕನಲ್ಲಿ ನಿಹಿತವಾಗಿರತಕ್ಕದು ಮತ್ತು ಅವುಗಳನ್ನು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಉಪಬಂಧಗಳಿಗನುಸಾರವಾಗಿ ಅವನು ನಡೆಸತಕ್ಕದ್ದು.

(2) ರಾಜ್ಯ ಸರ್ಕಾರವು ನಿರ್ದೇಶಕನಿಗೆ ಅವರ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಸಹಾಯ ಮಾಡಲು ಅದಕ್ಕೆ ಯೋಗ್ಯವೆಂದು ಭಾವಿಸಬಹುದಾದಂಥ ಅಧಿಕಾರಿಗಳನ್ನು ನೇಮಿಸಬಹುದು.

**6. ದಳದ ಸದಸ್ಯರ ನೇಮಕಾತಿ.-** ನಿರ್ದೇಶಕನು ಅಥವಾ ರಾಜ್ಯಸರ್ಕಾರವು ಈ ಬಗ್ಗೆ ಅಧಿಖ್ರುತಗೊಳಿಸಬಹುದಾಂಥ ಆ ದಳದ ಇತರ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಿಗನುಸಾರವಾಗಿ ಆ ದಳದ ಸದಸ್ಯರನ್ನು ನೇಮಕಮಾಡತಕ್ಕದ್ದು.

**7. ದಳದ ಸದಸ್ಯರಿಗೆ ಪ್ರಮಾಣ ಪತ್ರವನ್ನು ಕೊಡುವುದು.-** (1) ಪ್ರತಿಯೊಬ್ಬ ವ್ಯಕ್ತಿಯು ದಳಕ್ಕೆ ನೇಮಕಗೊಂಡ ಮೇಲೆ ನಿರ್ದೇಶಕನು ಅಥವಾ ರಾಜ್ಯ ಸರ್ಕಾರವ ಈ ಬಗ್ಗೆ ಅಧಿಕೃತಗೊಳಿಸಿದ ಅಧಿಕಾರಿಯ ಮೊಹರಿನೊಡನೆ ನಿಯಮಿಸಿದ ನಮೂನೆಯಲ್ಲಿ ಪ್ರಮಾಣಪತ್ರವನ್ನು ಪಡೆಯತಕ್ಕದ್ದು; ಮತ್ತು ಆ ತರುವಾಯ ಅಂಥ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಆ ದಳದ ಸದಸ್ಯನ ಅಧಿಕಾರಿಗಳು, ಪ್ರಕಾರ್ಯಗಳು ಮತ್ತು ವಿಶೇಷ ಹಕ್ಕುಗಳನ್ನು ಹೊಂದಿತಕ್ಕುದು.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಪ್ರಮಾಣಪತ್ರವು ಅದರಲ್ಲಿ ಹೆಸರಿಸಿದ ವ್ಯಕ್ತಿಯು ಯಾವುದೇ ಕಾರಣಕ್ಕಾಗಿ ಆ ದಳದ ಸದಸ್ಯನಾಗಿರುವುದು ಕೊನೆ ಗೊಂಡಾಗ ಪರಿಣಾಮಕಾರಿಯಾಗಿರುವುದು ನಿಂತು ಹೋಗತಕ್ಕದ್ದು; ಮತ್ತು ಅವನು ಅಂಥ ಸದಸ್ಯನಾಗಿರುವುದು ಕೊನೆಗೊಂಡ ಮೇಲೆ ತತ್‌ಕ್ಷಣವೇ ಆ ಪ್ರಮಾಣ ಪತ್ರವನ್ನು ಪಡೆಯಲು ಅಧಿಕಾರ ಪಡೆದ ಯಾವನೇ ಅಧಿಕಾರಿಗೆ ಅದನ್ನು ಒಪ್ಪಿಸತಕ್ಕುದು.

(3) ಅಮಾನತ್ತಿನ ಯಾವುದೇ ಅವಧೀಯಲ್ಲಿ ಆ ದಳದ ಸದಸ್ಯನಲ್ಲಿ ನಿಹಿತವಾಗಿದ್ದ ಅಧಿಕಾರಿಗಳು, ಪ್ರಕಾರ್ಯಗಳು ಮತ್ತು ವಿಶೇಷ ಹಕ್ಕುಗಳು ನಿಲಂಬನದಲ್ಲಿ ಇರತಕ್ಕದ್ದು. ಆದರೆ ಅಂಥ ಸದಸ್ಯನು ಅವನನ್ನು ಅಮಾನತ್ತಿನಲ್ಲಿ ಇಟ್ಟಿರದಿದ್ದರೆ ಅವನು ಒಳಪಡಬಹುದಾಗಿದ್ದಂಥಹುದೇ ಆದ ಶಿಸ್ತಿಗೆ ಹಾಗೂ ದಂಡನೆಗಳಿಗೆ ಅವನು ಒಳಪಟ್ಟಿರುವುದು ಮುಂದುವರಿಯತಕ್ಕುದು.

**8. ಸಹಾಯಕ ಅಗ್ನಿಶಾಮಕ ದಳ.-** (1) ದಳವನ್ನು ಹೆಚ್ಚಿಸುವುದು ಅವಶ್ಯ ವೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದಾಗಲೆಲ್ಲಾ ಅದು ತಾನು ಯೋಗ್ಯವೆಂದು ಭಾವಿಸಬಹುದಾದಂಥ ಪ್ರವೇಶಕ್ಕಾಗಿ ಮತ್ತು ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ ಸ್ವಯಂ ಸೇವಕರನ್ನು ಭರ್ತಿ ಮಾಡಿಕೊಳ್ಳುವ ಮೂಲಕ ಸಹಾಯಕ ದಳವನ್ನು ರಚಿಸಬಹುದು.

(2) (1) ನೇ ಉಪ-ಪ್ರಕರಣದ ಮೇರೆಗೆ ಭರ್ತಿ ಮಾಡಿದ ಸಹಾಯಕ ದಳದ ಪ್ರತಿಯೊಬ್ಬ ಸದಸ್ಯನು-

(ಎ) ರಾಜ್ಯಸರ್ಕಾರವು ಅನುಮೋದಿಸಿದ ನಮೂನೆಯಲ್ಲಿ ಪ್ರಮಾಣಪತ್ರವನ್ನು ಪಡೆಯತಕ್ಕದು.

(ಬಿ) ಅವನಲ್ಲಿ ಆ ಪ್ರಮಾಣ ಪತ್ರದಲ್ಲಿ ವಿಶೇಷವಾಗಿ ನಮೂದಿಸಿದ ಆ ದಳದ ಸದಸ್ಯನ ಎಲ್ಲ ಅಧಿಕಾರಗಳ ಅಥವಾ ಅಂಥ ವಿಶೇಷ ಹಕ್ಕುಗಳು ಮತ್ತು ಕರ್ತವ್ಯಗಳು ನಿಹಿತವಾಗಿರತಕ್ಕದು; ಮತ್ತು

(ಸಿ) ಅವನು ನಿರ್ದೇಶಕನ ಆದೇಶಗಳೀಗೆ ಒಳಪಟ್ಟಿರತಕ್ಕದು.

## ಅಧ್ಯಾಯ -III

## ರಾಜ್ಯ ಸರ್ಕಾರ, ದಳದ ನಿರ್ದೇಶಕ ಮತ್ತು ಸದಸ್ಯರ ಅಧಿಕಾರಗಳು

**9. ವಿನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.-** ರಾಜ್ಯಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಅದು ಯೋಗ್ಯವೆಂದು ಯೋಚಿಸಬಹುದಾಂದಂಥ ನಿಯಮಗಳನ್ನು .

(ಎ) ಅದು ಸರಿ ಎಂದು ಭಾವಿಸುವಂಥ ಉಪಕರಣಗಳು ಮತ್ತು ಸಾಧನ ಸಾಮಗ್ರಿಗಳನ್ನು ದಳಕೆ ಒದಗಿಸುವುಕ್ಕಾಗಿ;

(ಬಿ) ನೀರಿನ ಸಾಕಷ್ಟು ಸರಬರಾಜನ್ನು ಒದಗಿಸುವುದಕ್ಕಾಗಿ ಮತ್ತು ಅದು ಉಪಯೋಗಿಸಲು ಲಭ್ಯವಾಗಿರತಕ್ಕದ್ದುನ್ನು ಸುನಿಶ್ಚಿತಗೊಳಿಸುವುದಕ್ಕಾಗಿ;

(ಸಿ) ದಳದ ಸದಸ್ಯರಿಗೆ ಮತ್ತು ಅದರ ಅಗ್ನಿಶಾಮಕ ಉಪಕರಣಗಳಿಗೆ ಸ್ಥಳಾವಕಾಶವನ್ನು ಮಾಡಿಕೊಡುವುದಕ್ಕಾಗಿ ಠಾಣೆಗಳನ್ನು ರಚಿಸುವುದು ಅಥವಾ ಒದಗಿಸುವುದು ಅಥವಾ ಸ್ಥಳಗಳನ್ನು ಬಾಡಿಗೆಗೆ ತೆಗೆದುಕೊಳ್ಳುವುದಕ್ಕಾಗಿ;

(ಡಿ) ಬೆಂಕಿಗಳ ಬಗ್ಗೆ ನೋಟೀಸನ್ನು ಕೊಟ್ಟಿರುವ ವ್ಯಕ್ತಿಗಳಿಗೆ ಮತ್ತು ಬೆಂಕಿ ಗಳುಂಟಾದ ಮೇಲೆ ಆ ದಳಕ್ಕೆ ಪರಿಣಾಮಕಾರಿಯಾದ ಸೇವೆಯನ್ನು ಸಲ್ಲಿಸಿರುವವರಿಗೆ ಬಹುಮಾನಗಳನ್ನು ಕೊಡುವುದಕ್ಕಾಗಿ;

(ಇ) ದಳದ ಸದಸ್ಯರ ತರಬೇತಿ, ಶಿಸ್ತು ಮತ್ತು ಒಳ್ಳೆಯ ನಡತೆಗಾಗಿ;

(ಎಫ್) ಬೆಂಕಿಯ ಬಗ್ಗೆ ಯಾವುದೇ ಎಚ್ಚರಿಕೆಯ ಸಂಬAಧದಲ್ಲಿ ಅವಶ್ಯವಾದ ಉಪಕರಣಗಳ ಮತ್ತು ಸಾಧನ ಸಾಮಗ್ರಿಗಳೊಂದಿಗೆ ದಳದ ಸದಸ್ಯರ ತ್ವರಿತ ಹಾಜರಾತಿಗಾಗಿ:

(ಜಿ) ಈ ಅಧಿನಿಯಮವು ಜಾರಿಯಲ್ಲಿರುವಂಥ ಯಾವುದೇ ಪ್ರದೇಶದ ಪರಿಮಿತಿಗಳಾಚೆ ಅಂಥ ಪರಿಮಿತಿಗಳ ನೆರೆಹೊರೆಯಲ್ಲಿ ಅಗ್ನಿಶಾಮಕ ಉದ್ದೇಶಗಳಿಗಾಗಿ ಉಪಕರಣಗಳು ಮತ್ತು ಸಾಧನ ಸಾಮಗ್ರಿಯೊಂದಿಗೆ ದಳದ ಸದಸ್ಯರನ್ನು ಕಳುಹಿಸುವುದಕ್ಕಾಗಿ;

(ಎಚ್) ಯಾವುದೇ ರಕ್ಷಣೆ, ಕಾಪಾಡುವಿಕೆ, ಅಥವಾ ಇತರ ಅಂಥಹುದೇ ಕೆಲಸದಲ್ಲಿ ದಳದ ಸದಸ್ಯರನ್ನು ನಿಯೋಜಿಸುವುದಕ್ಕಾಗಿ;

(ಐ) ನಿರ್ದೇಶಕನ ಅಧಿಕಾರಗಳು, ಕರ್ತವ್ಯಗಳು ಹಾಗೂ ಪ್ರಕಾರ್ಯಗಳನ್ನು ವಿನಿಯಮನಗೊಳಿಸುವುದು ಮತ್ತು ನಿಯಂತ್ರಿಸುವುದಕ್ಕಾಗಿ; ಮತ್ತು

(ಜೆ) ಸಾಮಾನ್ಯವಾಗಿ ದಳವನ್ನು ತಕ್ಕ ದಕ್ಷತೆಯ ಸ್ಥಿತಿಯಲ್ಲಿ ಇಟ್ಟುಕೊಂಡು ಬರುವುದಕ್ಕಾಗಿ ರಚಿಸಬಹುದು.

**10. ಬೆಂಕಿ ಸಂಭವಿಸಿದಲ್ಲಿ ದಳದ ಸದಸ್ಯರ ಅಧಿಕಾರಗಳು .-** ಈ ಅಧಿನಿಯಮವು ಜಾರಿಯಲ್ಲಿರುವಂಥ ಯಾವುದೇ ಪ್ರದೇಶದಲ್ಲಿ ಬೆಂಕಿಯು ಸಂಭವಿಸಿದ ಮೇಲೆ ಆ ಸ್ಥಳದಲ್ಲಿ ಅಗ್ನಿಶಾಮಕ ಕಾರ್ಯಾಚರಣೆಗಳ ಪ್ರಭಾರದಲ್ಲಿರುವ ದಳದ ಯಾವನೇ ಸದಸ್ಯನು,

(ಎ) ಬೆಂಕಿಯನ್ನು ನಂದಿಸುವುದಕ್ಕಾಗಿ ಅಥವಾ ಪ್ರಾಣ ಅಥವಾ ಸ್ವತ್ತನ್ನು ರಕ್ಷಿಸುವುದಕ್ಕಾಗಿನ ಕಾರ್ಯಾಚರಣೆಯಲ್ಲಿ ಅವನು ಹಾಜರಾತಿಯಿಂದಹಸ್ತಕ್ಷೇಪ ಮಾಡುವ ಅಥವಾ ಅಡ್ಡಿಪಡಿಸುವ ಯಾವನೇ ವ್ಯಕ್ತಿಯನ್ನು ತೆಗೆದುಹಾಕುವುದು ಅಥವಾ ಅವನನ್ನು ತೆಗೆದು ಹಾಕಲು ದಳದ ಯಾವನೇ ಇತರ ಸದಸ್ಯನಿಗೆ ಆದೇಶ ಮಾಡಬಹುದು.

(ಬಿ) ಯಾವ ಬೀದಿ ಅಥವಾ ದಾರಿಯಲ್ಲಿ ಅಥವಾ ಅದರ ಸಮೀಪದಲ್ಲಿ ಬೆಂಕಿಯು ಉರಿಯುತ್ತಿರುವುದೋ ಆ ಯಾವುದೇ ಬೀದಿ ಅಥವಾ ದಾರಿಯನ್ನು ಮುಚ್ಚಬಹುದು.

(ಸಿ) ಬೆಂಕಿಯನ್ನು ನಂದಿಸುವ ಉದ್ದೇಶಕ್ಕಾಗಿ, ಸಾಧ್ಯವಿದ್ದಷ್ಟು ಕಡಿಮೆ ಹಾನಿಯಿಂದ ಮತ್ತು ನೀರ ಕೊಳವೆಯನ್ನು ಅಥವಾ ಉಪಕರಣಗಳನ್ನು ಕೊಂಡೊಯ್ಯುವುದಕ್ಕಾಗಿ ಯಾವುವೇ ಆವರಣಗಳೊಳಗೆ ನುಗ್ಗಬಹುದು ಅಥವಾ ಭೇಧಿಸಿ ನುಗ್ಗಬಹುದು ಅಥವಾ ಅವುಗಳನ್ನು ಕೆಡವಬಹುದು ಅಥವಾ ಅವುಗಳಲ್ಲಿ ನುಗ್ಗುವಂತೆ ಮಾಡಬಹುದು ಅಥವಾ ಅವುಗಳಲ್ಲಿ ಭೇದಿಸಿ ನುಗ್ಗುವಂತೆ ಮಾಡಬಹುದು, ಅಥವಾ ಅವುಗಳನ್ನು ಕೆಡವಿಸುವಂತೆ ಮಾಡಬಹುದು.

(ಡಿ) ಆ ಪ್ರದೇಶದಲ್ಲಿ ನೀರು ಸರಬರಾಜಿನ ಪ್ರಭಾರದಲ್ಲಿರುವ ಪ್ರಾಧಿಕಾರಿಯನ್ನು ಬೆಂಕಿಯು ತಲೆದೋರಿರುವ ಸ್ಥಳದಲ್ಲಿ ನಿರ್ದಿಷ್ಟಪಡಿಸಿದ ಒತ್ತಡದಲ್ಲಿ ನೀರನ್ನು ಒದಗಿಸುವ ಹಾಗೆ ನೀರಿನ ಮುಖ್ಯ ಕೊಳವೆಗಳನ್ನು ನಿಯಂತ್ರಿಸಲು ಮತ್ತು ಅಂಥ ಬೆಂಕಿಯನ್ನು ನಂದಿಸುವ ಅಥವಾ ಅದು ಹಬ್ಬುವುದನ್ನು ಪರಿಮಿತಗೊಳಿಸುವ ಉದ್ದೇಶಕ್ಕಾಗಿ ಯಾವುದೇ ತೊರೆ, ಕೊಳ ಬಾವಿ ಅಥವಾ ಕೆರೆ ಅಥವಾ ಸಾರ್ವಜನಿಕ ಅಥವಾ ಖಾಸಗಿಯ ನೀರು ಲಭ್ಯವಿರುವ ಯಾವುದೇ ಮೂಲದ ನೀರನ್ನು ಉಪಯೋಗಿಸಲು ಅಗತ್ಯಪಡಿಸಬಹುದು.

(ಇ) ಅಗ್ನಿಶಾಮಕ ಕಾರ್ಯಾಚರಣೆಗಳಿಗೆ ಅಡ್ಡಿಯನ್ನುಂಟು ಮಾಡುವ ಸಂಭವ ವಿರುವ ವ್ಯಕ್ತಿಗಳ ಕೂಟವನ್ನು ಚದುರಿಸುವುದಕ್ಕಾಗಿ ಪೊಲೀಸು ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯಾಗಿದ್ದಿದ್ದರೆ ಹೇಗೋ ಹಾಗೆ ಮತ್ತು ಕೂಟವು ಅಕ್ರಮಕೂಟವಾಗಿ ಇದ್ದಿದ್ದರೆ ಹೇಗೋ ಹಾಗೆ ಅಂಥಹುದೇ ಆದ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಸಂಬಂಧಿಸಿದಂತೆ ಅಂಥ ಅಧಿಕಾರಿಯು ಹಕ್ಕುಳ್ಳವನಾಗಿರಬಹುದಾದಂಥಹುದೇ ಆದ ಉನ್ಮುಕ್ತಿಗಳಿಗೆ ಮತ್ತು ಸಂರಕ್ಷಣೆಗೆ ಹಕ್ಕುಳ್ಳವನಾಗಿರತಕ್ಕುದು.

(ಎಫ್) ಸಾಮಾನ್ಯವಾಗಿ ಬೆಂಕಿಯನ್ನು ನಂದಿಸುವುದಕ್ಕಾಗಿ ಅಥವಾ ಪ್ರಾಣ ಅಥವಾ ಆಸ್ತಿಯನ್ನು ಸಂರಕ್ಷಿಸುವುದಕ್ಕಾಗಿ ಅವಶ್ಯವಾಗಿರುವೆಂಬುದಾಗಿ ತನಗೆ ಕಂಡು ಬರುವಂಥ ಕ್ರಮ ಗಳನ್ನು ಕೈಗೊಳ್ಳಬಹುದು.

**11. ನೀರಿನ ಸರಬರಾಜಿಗಾಗಿ ಏರ್ಪಾಡುಗಳನ್ನು ಮಾಡಿಕೊಳ್ಳಲು ನಿರ್ದೇಶಕನ ಅಧಿಕಾರಿ.-** ನಿರ್ದೇಶಕನು, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊAದಿಗೆ, ಬೆಂಕಿ ಯುಂಟಾದ ಸಂದರ್ಭದಲ್ಲಿ ನೀರಿನ ಸಾಕಷ್ಟು ಸರಬರಾಜನ್ನು ಸುನಿಶ್ಚಿಗೊಳಿಸಿಕೊಳ್ಳುವುದಕ್ಕಾಗಿ ಯಾವುದೇ

ಪ್ರದೇಶದಲ್ಲಿ ನೀರು ಸರಬರಾಜಿನ ಪ್ರಬಾರವನ್ನು ಹೊಂದಿರುವ ಪ್ರಾಧಿಕಾರಿಯೊಡನೆ ಹಣ ಸಂಧಾಯ ಅಥವಾ ಇತರ ವಿಷಯದ ಬಗ್ಗೆ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಬಹುದಾಂಥ ನಿಬಂಧನೆಗಳ ಮೇಲೆ ಒಪ್ಪಂದವನ್ನು ಮಾಡಿಕೊಳ್ಳಬಹುದು.

**12. ಸಹಾಯಕ್ಕಾಗಿ ಏರ್ಪಾಡುಗಳನ್ನು ಮಾಡಿಕೊಳ್ಳಲು ನಿರ್ದೇಶಕನ ಅಧಿಕಾರಿ.-** ನಿರ್ದೇಶಕನು, ರಾಜ್ಯಸರ್ಕಾರದ ಪೂರ್ವ ಮಂಜೂರಾತಿಯೊAದಿಗೆ, ಅಗ್ನಿಶಾಮಕ ಉದ್ದೇಶಗಳಿಗಾಗಿ ಸಿಬ್ಬಂದಿ ಅಥವಾ ಸಾಧನ ಸಾಮಗ್ರಿಯನ್ನು ಅಥವಾ ಅವೆರಡನ್ನೂ ನಿಯೋಜಿಸುವ ಮತ್ತು ಇಟ್ಟುಕೊಂಡಿರುವ ಯಾವನೇ ವ್ಯಕ್ತಿಯೊಡನೆ ಈ ಅಧಿನಿಯಮವು ಜಾರಿಯಲ್ಲಿರುವಂಥ ಯಾವುದೇ ಪ್ರದೇಶದಲ್ಲಿ ಸಂಭವಿಸುವ ಬೆಂಕಿಯನ್ನು ಎದುರಿಸುವ ಉದ್ದೇಶಕ್ಕಾಗಿ ಸಹಾಯವನ್ನು ಆ ವ್ಯಕ್ತಿಯು ಒದಗಿಸಲು ಆ ಏರ್ಪಾಡುಗಳ ಮೂಲಕ ಅಥವಾ ಅವುಗಳ ಮೇರೆಗೆ ಹಣ ಸಂದಾಯ ಅಥವಾ ಇತರ ವಿಷಯದ ಬಗ್ಗೆ ಉಪಬಂಧಿಸಬಹುದಾದAಥ ನಿಬಂಧನೆಗಳ ಮೇರೆಗೆ ಸುನಿಶ್ಚಯಗೊಳಿಸಿಕೊಳ್ಳಲು ಏರ್ಪಾಡುಗಳನ್ನು ಮಾಡಿಕೊಳ್ಳಬಹುದು;

**13. ಪ್ರತಿಬಂಧಕ ಕ್ರಮಗಳು.–** (1) ರಾಜ್ಯ ಸರ್ಕಾರದವರು, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆ ಮೂಲಕ, ಯಾವುದೇ ಪ್ರದೇಶದಲ್ಲಿ ಯಾವುದೇ ಆವರಣಗಳ ಅಥವಾ ತನ್ನ ಅಭಿಪ್ರಾಯದಲ್ಲಿ ಬೆಂಕಿಯ ಅಪಾಯವನ್ನುಂಟುಮಾಡುವ ಸಂಭವವಿರುವAಥ ಉದ್ದೇಶಗಳಿಗಾಗಿ ಉಪಯೋಗಿಸಿದ ಯಾವುದೇ ವರ್ಗದ ಆವರಣಗಳ ಒಡೆಯರನ್ನು ಅಥವಾ ಅಧಿಭೋಗದಾರರನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಅಗತ್ಯಪಡಿಸಬಹುದು.

(2) (1) ನೇ ಉಪ-ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿರುವಲ್ಲೀ ನಿರ್ದೇಶಕನಿಗೆ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ದಳದ ಯಾವನೆ, ಅಧಿಕಾರಿಗೆ ಬೆಂಕಿಯ ಅಪಾಯವನ್ನುಂಟುಮಾಡುವ ಸಂಭವವಿರುವ ವಸ್ತುಗಳನ್ನು ಅಥವಾ ಸರಕುಗಳನ್ನು ಸುರಕ್ಷಿತವಾದ ಸ್ಥಳಕ್ಕೆ ಸ್ಥಳಾಂತರಿಸಬೇಕೆಂದು ನಿರ್ದೇಶಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು. ಮತ್ತು ಹಾಗೆ ಮಾಡಲು ಆ ಒಡೆಯನು ಅಥವಾ ಅಧಿಭೋಗದಾರನು ತಪ್ಪಿದಲ್ಲಿ, ನಿರ್ದೇಶಕನು ಅಥವಾ ಅಂಥ ಅಧಿಕಾರಿಯು ಇಡೆಯನಿಗೆ ಅಥವಾ ಅಧಿಭೋಗದಾರನಿಗೆ ಮನವಿಮಾಡಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಅಂಥ ವಸ್ತುಗಳನ್ನು ಅಥವಾ ಸರಕುಗಳನ್ನು ಅಭಿಗ್ರಹಿಸಬಹುದು, ತಡೆಹಿಡಿದಿಟ್ಟುಕೊಳ್ಳಬಹುದು ಅಥವಾ ಸ್ಥಳಾಂತರಿಸಬಹುದು.

[1][(3) ಎತ್ತರದ ಕಟ್ಟಡವನ್ನು ನಿರ್ಮಾಣ ಮಾಡಲು ಉದ್ದೇಶಿಸುವ ಯಾರೇ ವ್ಯಕ್ತಿಯು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು.

(4) ಅಗ್ನಿಶಾಮಕ ಮತ್ತು ಜೀವ ಸುರಕ್ಷತೆಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಕಟ್ಟಡ ಸಂಹಿತೆ, 2016ರ ಉಪಬಂಧಗಳಿಗೆ ಒಳಪಟ್ಟು ಎತ್ತರದ ಕಟ್ಟಡಗಳ ನಿರ್ಮಾಣಕ್ಕಾಗಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ನಿರಾಕ್ಷೇಪಣಾ ಪತ್ರವನ್ನು ನೀಡುವಾಗ, ಅದು

ನಿಯಮಿಸಬಹುದಾದಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು ಮತ್ತು ಅಂಥ ಶುಲ್ಕವನ್ನು ಸಂಗ್ರಹಿಸತಕ್ಕದ್ದು.

**ವಿವರಣೆ:** "ಎತ್ತರದ ಕಟ್ಟಡ" ಎಂದರೆ ರಾಷ್ಟ್ರೀಯ ಕಟ್ಟಡ ಸಂಹಿತೆ, 2016ರಲ್ಲಿ ಪರಿಭಾಷಿಸಿದಂತೆ ಅದರ ಅಧಿಭೋಗದಾರಿಕೆಯನ್ನು ಲೆಕ್ಕಿಸದೆ 21 ಮೀಟರುಗಳ ಅಥವಾ ಅದಕ್ಕಿಂತ ಹೆಚ್ಚಿನ ಎತ್ತರದ ಕಟ್ಟಡ.][1]

1.2023ರ ಅಧಿನಿಯಮ 24ರ ಮೂಲಕ ದಿ:24.3.2023ರಂದು ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ - IV

## ದಳವನ್ನು ಇಟ್ಟುಕೊಂಡು ಬರುವುದರ ಮೇಲಿನ ವೆಚ್ಚ

**14. ದಳದ ಮೇಲಿನ ವೆಚ್ಚ.–** (1) ದಳಕ್ಕೆ ಸಂಬಂಧಿಸಿದ ಇಡೀ ವೆಚ್ಚವನ್ನು ರಾಜ್ಯದ ಸಂಚಿತ ನಿಧಿಯಿಂದ ಭರಿತಕ್ಕುದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ ಈ ಅಧಿನಿಯಮವು ಜಾರಿಯಲ್ಲಿರುವಂಥ ಯಾವುದೇ ಪ್ರದೇಶದ ಸ್ಥಳೀಯ ಪ್ರಾಧಿಕಾರವು, ಆ ಪ್ರದೇಶದಲ್ಲಿ ಇಟ್ಟುಕೊಂಡು ಬಂದಿರುವ ದಳದ ಭಾಗದ ವೆಚ್ಚದ ಬಗ್ಗೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂಥ ವಂತಿಗೆಯನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕುದು.

**15. ಬೆಂಕಿ ತೆರಿಗೆಯನ್ನು ವಿಧಿಸುವುದು.-** (1) ರಾಜ್ಯ ಸರ್ಕಾರವು, ಈ ಅಧಿನಿಯಮವು ಜಾರಿಯಲ್ಲಿರುವಂಥ ಯಾವುದೇ ಪ್ರದೇಶದಲ್ಲಿ ಇರುವಂಥ ಆ ಭೂಮಿಗಳು ಮತ್ತು ಕಟ್ಟಡಗಳ ಮೇಲೆ ಮತ್ತು ಆ ಪ್ರದೇಶದಲ್ಲಿ ಯಾವುದರ ಮೇಲೆ ಯಾವುದೇ ಸ್ಥಳಿಯ ಪ್ರಾಧಿಕಾರವು ಯಾವುದೇ ಹೆಸರಿನಿಂದ ಕರೆಯುವ ಸ್ವತ್ತು ತೆರಿಗೆಯನ್ನು ವಿಧಿಸಿದೆಯೋ ಅದರ ಮೇಲೆ ಬೆಂಕಿ ತೆರಿಗೆಯೆಂದು ಕರೆಯುವ ಉಪಕರವನ್ನು ವಿಧಿಸಬಹುದು.

(2) ಬೆಂಕಿ ತೆರಿಗೆಯನ್ನು ಸ್ವತ್ತು ತೆರಿಗೆಯ ಮೇಲಿನ ಅಧಿಭಾರದ ರೂಪದಲ್ಲಿ ರಾಜ್ಯ ಸಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ಧರಿಸಬಹುದಾಂದಥ ಸ್ವತ್ತು ತೆರಿಗೆಯ ಶೇಕಡಾ ಹತ್ತರಷ್ಟು ಮೀರದಂಥ ದರದಲ್ಲಿ ವಿಧಿಸತಕ್ಕದ್ದು.

[1][ಪರಂತು, ಸದರಿ ಅಧಿನಿಯಮದ 13ನೇ ಪ್ರಕರಣದಲ್ಲಿ ಪರಿಭಾಷಿಸಿರುವಂತೆ ಹೊಸದಾಗಿ ನಿರ್ಮಾಣಗೊಂಡಿರುವ ಬಹುಮಹಡಿ ಕಟ್ಟಡಗಳ(ಎತ್ತರವಾದ ಕಟ್ಟಡಗಳ) ಮೇಲೆ ಸ್ವತ್ತು ತೆರಿಗೆಯ ಶೇಕಡಾ ಒಂದರಷ್ಟು ದರದಲ್ಲಿನ ಅಧಿಭಾರದ (Surcharge) ರೂಪದಲ್ಲಿ, ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧಿನಿಯಮ, 2025ರ ಪ್ರಾರಂಭದ ದಿನಾಂಕದಿಂದ ಜಾರಿಗೆ ಬರುವಂತೆ ಬೆಂಕಿ ಉಪಕರವನ್ನು ವಿಧಿಸತಕ್ಕದ್ದು:

ಮತ್ತು ಪರಂತು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಯಾವುದೇ ಸಾರ್ವಜನಿಕ ಪ್ರಾಧಿಕಾರದ ನಿಯಂತ್ರಣ ಅಥವಾ ಸ್ವಾಧೀನದಡಿಯಲ್ಲಿರುವ ಯಾವುದೇ ಕಟ್ಟಡದ ಮೇಲೆ ಬೆಂಕಿ ಉಪಕರವನ್ನು ವಿಧಿಸತಕ್ಕದ್ದಲ್ಲ.][1]

1. 2025ರ ಅಧಿನಿಯಮ 59ರ ಮೂಲಕ ದಿನಾಂಕ: ರಂದು ಜಾರಿಗೆ ಬರುವಂತೆ ಸೇರಿಸಲಾಗಿದೆ.

**16. ಬೆಂಕಿ ತೆರಿಗೆ ನಿರ್ಧರಣೆ, ಸಂಗ್ರಹಣೆ ಇತ್ಯಾದಿಗಳ ವಿಧಾನ.-** (1) ಸ್ವತ್ತು ತೆರಿಗೆಯನ್ನು ವಿಧಿಸಲು ಆ ಪ್ರದೇಶದ ಸ್ಥಳೀಯ ಪ್ರಾಧಿಕಾರವನ್ನು ಅಧಿಕೃತ ಗೊಳಿಸುವ ಕಾನೂನಿನ ಮೇರೆಗೆ ಅಂಥ ತೆರಿಗೆಯ ನಿರ್ಧರಣೆ, ಸಂಗ್ರಹಣೆ ಮತ್ತು ಸಂದಾಯವನ್ನು ಜಾರಿಮಾಡಲು ತತ್ಕಾಲದಲ್ಲಿ ಶಕ್ತಗೊಂಡ ಪ್ರಾಧಿಕಾರಗಳು, ರಾಜ್ಯ ಸರ್ಕಾರದ ಪರವಾಗಿ ಮತ್ತು ಈ ಅಧಿನಿಯಮದ ಮೇರೆಗೆ ರಚಿಸಿದ ಸ್ವತ್ತು ತೆರಿಗೆಯನ್ನು ನಿರ್ಧರಿಸುವ ಸಂದಾಯ ಮಾಡುವ ಮತ್ತು ಸಂಗ್ರಹಣೆ ಮಾಡುವಂಥಹುದೇ ರೀತಿಯಲ್ಲಿ ಬೆಂಕಿ ತೆರಿಗೆಯನ್ನು ನಿರ್ಧರಿಸತಕ್ಕದ್ದು, ಸಂಗ್ರಹಿಸತಕ್ಕುದು ಮತ್ತು ಸಂದಾಯವನ್ನು ಜಾರಿಗೊಳಿಸತಕ್ಕುದು ಮತ್ತು ಈ ಉದ್ದೇಶಕ್ಕಾಗಿ ಹಿಂದೆ ಹೇಳಿದ ಕಾನೂನಿನ ಮೇರೆಗೆ ಅವರು ಹೊಂದಿರುವ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ಅವರು ಚಲಾಯಿಸಬಹುದು ಮತ್ತು ವಿವರಪಟ್ಟಿಕೆಗಳು, ಅಪೀಲುಗಳು, ಪುನರವಲೋಕನಗಳು, ಪುನರೀಕ್ಷಣೆಗಳು, ಒಪ್ಪಿಸುವಿಕೆಗಳು ಮತ್ತು ದಂಡನೆಗಳಿಗೆ ಸಂಬAಧಪಟ್ಟ ಉಪಬಂಧಗಳು ಒಳಗೊಮಡು ಅಂಥ ಕಾನೂನಿನ ಉಪಬಂಧಗಳು ತದನುಸಾರವಾಗಿ ಅನ್ವಯವಾಗಿರತಕ್ಕುದು.

(2) ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ಬೆಂಕಿ ತೆರಿಗೆಯ ಒಟ್ಟು ಉತ್ಪತ್ತಿಗಳ ಭಾಗವನ್ನು ಆ ತೆರಿಗೆಯ ಸಂಗ್ರಹಣೆಯ ಖರ್ಚನ್ನು ಭರಿಸಲು ಕಳೆಯತಕ್ಕುದು.

(3) ಸಂಗ್ರಹಣೆಯ ಖರ್ಚನ್ನು ಕಳೆದು ಈ ಅಧಿನಿಯಮದ ಮೇರೆಗೆ ಸಂಗ್ರಹ ಮಾಡಿದ ಬೆಂಕಿ ತೆರಿಗೆಯ ಉತ್ಪತ್ತಿಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯ ಅಂತರಗಳಲ್ಲಿ ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕುದು:

**17. ಫೀಜುಗಳು.–** (1) ಈ ಅಧಿನಿಯಮವು ಜಾರಿಯಲ್ಲಿರುವಂಥ ಯಾವುದೇ ಪ್ರದೇಶದ ಪರಿಮಿತಿಗಳಾಚೆ ದಳದ ಸದಸ್ಯರನ್ನು ಅಂಥ ಪರಿಮಿತಿಗಳ ನೆರೆಹೊರೆಯಲ್ಲಿ ಬೆಂಕಿಯನ್ನು ನಂದಿಸುವುದಕ್ಕಾಗಿ ಕಳುಹಿಸಿದಲ್ಲಿ ಬೆಂಕಿಯ ಸಂಭವಿಸಿದ ಅಥವಾ ಹರಡಿದ ಆವರಣಗಳ ಒಡೆಯ ಅಥವಾ ಅಧಿಭೋಗದಾರನು ಈ ಬಗ್ಗೆ ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಲು ಹೊಣೆಯಾಗಿರತಕ್ಕದ್ದು;

ಪರಂತು, ಹುಲ್ಲುಮೆದೆ, ಮೇವಿನ ಬಣವೆ ಅಥವಾ ಮಟ್ಟೆ ಗುಡಿಸಲು-ಇವುಗಳಲ್ಲಿ ಸಂಭವಿಸುವ ಅಥವಾ ಇವುಗಳಿಗೆ ಹರಡುವ ಬೆಂಕಿಯನ್ನು ನಂದಿಸುವುದಕ್ಕಾಗಿ ದಳದ ಸದಸ್ಯರನ್ನು ಹಾಗೆ ಕಳುಹಿಸಿರುವ ಸಂದರ್ಭದಲ್ಲಿ ಅಂಥ ಬೆಂಕಿಯು ಸಂಭವಿಸಿದ ಅಥವಾ ಹರಡಿದ ಆವರಣಗಳ ಒಡೆಯ ಅಥವಾ ಅಧಿಭೋಗದಾರನು ಅಂಥ ಫೀಜನ್ನು ಸಂದಾಯ ಮಾಡಲು ಹೊಣೆಯಾಗಿಒರತಕ್ಕುದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಫೀಜನ್ನು ನಿರ್ದೇಶಕನು ಒಡೆಯ ಅಥವಾ ಅನುಭೋಗದಾರನ ಮೇಲೆ ತಗಾದೆ ನೋಟೀಸನ್ನು ಜಾರಿ ಮಾಡಿದ ಮೂವತ್ತು ದಿವಸಗಳೊಳಗೆ

ಸಮದಾಯ ಮಾಡತಕ್ಕುದು ಮತ್ತು ಅದನ್ನು ಆ ಅವಧಿಯೊಳಗಾಗಿ ಸಂದಾಯ ಮಾಡದಿದ್ದರೆ ಅದನ್ನು ಭೂ ಕಂದಾಯದ ಬಾಕಿಯಂತೆ ವಸೂಲೀಯವಾಗತಕ್ಕುದು.

## ಅಧ್ಯಾಯ - V

## ಸ್ಥಳೀಯ ಪ್ರಾಧಿಕಾರದ ಅಗ್ನಿಶಾಮಕ ಸೇವೆಯ ಆಸ್ತಿಗಳು ಹಾಗೂ ಹೊಣೆಗಾರಿಕೆಗಳ ವರ್ಗಾವಣೆ

**18. ಸ್ಥಳೀಯ ಪ್ರಾಧಿಕಾರದ ಅಗ್ನಿಶಾಮಕ ಸೇವೆಯ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ.-** (1) ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿ ಈ ಅಧಿನಿಯಮವು ಜಾರಿಗೆ ಬರುವಂಥ ದಿನಾಂಕದAದು (ಇಲ್ಲಿ ಇನ್ನು ಮುಂದೆ ಈ ಅಧ್ಯಾಯದಲ್ಲಿ ಗೊತ್ತುಪಡಿಸಿದ ದಿವಸ ಎಂದು ಉಲ್ಲೇಖಿಸಲಾದ) ಅಂಥ ಸ್ಥಳಿಯ ಪ್ರಾಧಿಕಾರವು ಇಟ್ಟುಕೊಂಡು ಬಂದಿರುವ ಹಾಗೂ ಅಗ್ನಿಶಾಮಕ ಸೇವೆಗ ಸಂಬಂಧಿಸಿದ ಎಲ್ಲ ಆಸ್ತಿಗಳು ಹಾಗೂ ಹೊಣೆಗಾರಿಕೆಗಳು ರಾಜ್ಯ ಸರ್ಕಾರಕ್ಕೆ ವರ್ಗಾಯಿತವಾಗತಕ್ಕದು ಮತ್ತು ಅದರಲ್ಲಿ ನಿಹಿತವಾಗತಕ್ಕುದು.

(2) ಅಗ್ನಿಶಾಮಕ ಸೇವೆಗೆ ಸಂಬAಧಿಸಿದ ಆಸ್ತಿಗಳು ವಿಶೇಷವಾಗಿ ಅಗ್ನಿಶಾಮಕದ ಎಲ್ಲ ಸ್ವತ್ತನ್ನು ಒಳಗೊಂಡು ಅಗ್ನಿಶಾಮಕದ ಸೇವೆಗೆ ಸಂಬಂಧಿಸಿದ ಎಲ್ಲ ಹಕ್ಕುಗಳು ಮತ್ತು ಅಧಿಕಾರಗಳು ಮತ್ತು ಚರಸ್ವತ್ತಾಗಿರಲಿ ಅಥವಾ ಸ್ಥಿರಸ್ವತ್ತಾಗಿರಲಿ ಎಲ್ಲ ಸ್ವತ್ತುಗಳನ್ನು ಮತ್ತು ಸ್ಥಳಿಯ ಪ್ರಾಧಿಕಾರದ ಸ್ವಾಧೀನದಲ್ಲಿರಬಹುದಾದಂಥ ಸ್ವತ್ತಿನಲ್ಲಿ ಅಥವಾ ಅದರಿಂದ ಉಬ್ಬವಿಸುವ ಎಲ್ಲ ಹಿತಾಸಕ್ತಿಗಳು ಮತ್ತು ಹಕ್ಕುಗಳನ್ನು ಮತ್ತು ಸ್ಥಳಿಯ ಪ್ರಾಧಿಕಾರಿಯ ಅಗ್ನಿಶಾಮಕ ಸೇವೆಗೆ ಸಂಬಂಧಪಟ್ಟ ಎಲ್ಲಾ ಲೆಕ್ಕ ಪುಸ್ತಕಗಳು ಅಥವಾ ದಸ್ತಾವೇಜುಗಳನ್ನು ಒಳಗೊಳ್ಳುತ್ತದೆಂದು ಭಾವಿಸತಕ್ಕದ್ದು. ಮತ್ತು ಹೊಣೆಗಾರಿಕೆಗಳು ಆಗ ಅಸ್ತಿತ್ವದಲ್ಲಿರುವ ಮತ್ತು ಸ್ಥಳಿಯ ಪ್ರಾಧಿಕಾರದ ಅಗ್ನಿಶಾಮಕ ಸೇವೆಗೆ ಸಂಬಂಧಿಸಿದ ಎಲ್ಲ ಋಣಗಳನ್ನು ಹೊಣೆಗಾರಿಕೆಗಳನ್ನು ಮತ್ತು ಬಾಧ್ಯತೆಗಳನ್ನು ಒಳಗೊಳ್ಳುತ್ತದೆ ಎಂದು ಭಾವಿಸತಕ್ಕದ್ದು.

**19. ಭವಿಷ್ಯ ಸೇವಾ ನಿವೃತ್ತಿ ಮತ್ತು ಇತರ ಅಂಥಹುದೇ ನಿಧಿಗಳು.-** (1) 18ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಸ್ಥಳೀಯ ಪ್ರಾಧಿಕಾರದ ನಿಯೋಜಿತರ ಪ್ರಯೋಜನಕ್ಕಾಗಿ ಭವಿಷ್ಯ ನಿಧಿ ಅಥವಾ ಸೇವಾ ನಿವೃತ್ತಿ ನಿಧಿ ಅಥವಾ ಯಾವುದೇ ಇತರ ಅಂತಹುದೇ ನಿಧಿಯನ್ನು ಸ್ಥಾಪಿಸಿರುವಲ್ಲಿ, ಗೊತ್ತುಪಡಿಸಿದ ದಿವಸದಿಂದ ಅಂಥ ನಿಧಿಯ ಜಮೆಯಲ್ಲಿರುವ ಹಣವು, ಅಂಥ ನಿಧಿಗೆ ಸೇರಿದ ಯಾವುದೇ ಇತರೆ ಆಸ್ತಿಗಳೊಂದಿಗೆ 21ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರದ ನಿಯೋಜಿತವಾಗುವ ಸ್ಥಳೀಯ ಪ್ರಾಧಿಕಾರದ ನಿಯೋಜಿತರಿಗೆ ಅವು ಸಂಬಂಧಪಡುವಷ್ಟರ ಮಟ್ಟಿಗೆ, ಗೊತ್ತು ಪಡಿಸಿದ ದಿವಸದಂದು ರಾಜ್ಯ ಸರ್ಕಾರಕ್ಕೆ ವರ್ಗಾಯಿತವಾಗತಕ್ಕುದು ಮತ್ತು ಅದರಲ್ಲಿ ನಿಹಿತವಾಗತಕ್ಕುದು.

(2) (1)ನೇ ಉಪ-ಪ್ರಕರಣ ಮೇರೆಗಿನ ಹಂಚಿಕೆಯನ್ನು ರಾಜ್ಯ ಸರ್ಕಾರವು ಮಾಡತಕ್ಕದ್ದು ಮತ್ತು ಈ ಬಗ್ಗೆ ಅದರ ತೀರ್ಮಾನವು ಅಂತಿಮವಾಗಿರುತಕ್ಕುದು ಮತ್ತು ಸ್ಥಳೀಯ ಪ್ರಾಧಿಕಾರದ ಮೇಲೆ ಬಂಧನಕಾರಿಯಾಗಿರತಕ್ಕದ್ದು.

**20. ಸ್ಥಳೀಯ ಪ್ರಾಧಿಕಾರದ ಅಗ್ನಿಶಾಮಕ ಸೇವೆಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವರ್ಗಾವಣೆಯ ಸಾಮಾನ್ಯ ಪರಿಣಾಮ.-** (1) ಗೊತ್ತುಪಡಿಸಿದ ದಿವಸಕ್ಕೆ ನಿಕಟ ಪೂರ್ವದಲ್ಲಿ ಇರುವ ಅಥವಾ ಪರಿಣಾಮ ಹೊಂದಿರುವ ಮತ್ತು 18ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಸ್ಥಳೀಯ ಪ್ರಾಧಿಕಾರವು ಪಕ್ಷಕಾರನಾಗಿರುವಂಥ ಅಥವಾ ಅಂಥ ಸ್ಥಳೀಯ ಪ್ರಾಧಿಕಾರದ ಹೆಸರಿನಲ್ಲಿರುವಂಥ ಯಾವುದೇ ಸ್ವರೂಪದ ಎಲ್ಲ ಕರಾರುಗಳು ಒಪ್ಪಂದಗಳು ಮತ್ತು ಇತರೆ ಲಿಖಿತಗಳು, ಅವು ಸ್ಥಳೀಯ ಪ್ರಾಧಿಕಾರದ ಅಗ್ನಿಶಾಮಕ ಸೇವೆಗೆ ಸಂಬಂಧಪಡುವಷ್ಟರ ಮಟ್ಟಿಗೆ ಸಂದರ್ಭಾನುಸಾರ, ರಾಜ್ಯ ಸರ್ಕಾರದ ವಿರುದ್ಧ ಅಥವಾ ಪರವಾಗಿ ಇರುವಂತೆ ಪೂರ್ತಿ ಜಾರಿಯಲ್ಲಿರತಕ್ಕುದು ಮತ್ತು ಪರಿಣಾಮಕಾರಿ ಯಾಗಿರತಕ್ಕದು ಮತ್ತು ಸ್ಥಳೀಯ ಪ್ರಾಧಿಕಾರದ ಬದಲಾಗಿ ರಾಜ್ಯ ಸರ್ಕಾರವು ಅದಕ್ಕೆ ಪಕ್ಷಕಾರನಾಗಿದ್ದರೆ ಹೇಗೊ ಹಾಗೆ ಅಥವಾ ಅವುಗಳನ್ನು ರಾಜ್ಯ ಸರ್ಕಾರದ ಹೆಸರಿನಲ್ಲಿ ಮಾಡಿಕೊಂಡಿದ್ದಿದ್ದರೆ ಅಥವಾ ಕೊಟ್ಟೊದ್ದಿದ್ದರೆ ಹೇಗೊ ಹಾಗೆ ಪೂರ್ತಿಯಾಗಿ ಮತ್ತು ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದು ಅಥವಾ ಆ ಮೇರೆಗೆ ಕಾರ್ಯ ನಿರ್ವಹಿಸಬಹುದು.

(2) ಗೊತ್ತುಪಡಿಸಿದ ದಿವಸದಂದು 18ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಸ್ಥಳಿಯ ಪ್ರಾಧಿಕಾರದಿಂದ ಅಥವಾ ಅವರ ವಿರುದ್ಧ ಯಾವುದೇ ಸ್ವರೂಪದ ಯಾವುದೇ ದಾವೆ, ಅಪೀಲು, ಅಥವಾ ಇತರೆ ಕಾನೂನು ವ್ಯವಹರಣೆಯು ಇತ್ಯರ್ಥದಲ್ಲಿದ್ದರೆ, ಆಗ ಇಂಥ ಸ್ಥಳೀಯ ಪ್ರಾಧಿಕಾರದ ಅಗ್ನಿಶಾಮಕ ಸೇವೆಗೆ ಅದು ಸಂಬಂಧಪಡುವಷ್ಟರ ಮಟ್ಟಿಗೆ ಅದನ್ನು ಅಂಥ ಅಗ್ನಿಧಾಮಕ ಸೇವೆಗೆ ಸಂಬAಧಪಡುವಷ್ಟರ ಮಟ್ಟಿಗೆ ಸ್ಥಳೀಯ ಪ್ರಾಧಿಕಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಬದಲಾವಣೆಯ ಕಾರಣದಿಂದಾಗಿ ಕೊನೆಗೊಳ್ಳತಕ್ಕುದಲ್ಲ. ಮುಂದುವರಿಸದೆ ಇರತಕ್ಕುದಲ್ಲ ಅಥವಾ ಅದಕ್ಕೆ ಯಾವುದೇ ರೀತಿಯಲ್ಲಿ ಪ್ರತಿಕೂಲವಾಗಿ ಬಾಧಕವಾಗತಕ್ಕುದಲ್ಲ, ಆದರೆ ಆ ದಾವೆ ಅಪೀಲು ಅಥವಾ ಇತರ ಕಾನೂನು ವ್ಯವಹಾರಣೆಯನ್ನು ರಾಜ್ಯ ಸರ್ಕಾರವು ಅಥವಾ ಅದರ ವಿರುದ್ಧ ಮುಮದುವರಿಸಬಹುದು. ನಡೆಸಬಹುದು ಅಥವಾ ಜಾರಿಗೊಳಿಸಬಹುದು.

**21. ಸ್ಥಳೀಯ ಪ್ರಾಧಿಕಾರದ ನಿಯೋಜಿತರ ಸೇವೆಯ ವರ್ಗಾವಣೆ.-** (1) ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ 18ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಸ್ಥಳಿಯ ಪ್ರಾಧಿಕಾರದ ಪೂವರ್ಣಕಾಲಿಕ ಮತ್ತು ಅಂಥ ಸ್ಥಳೀಯ ಪ್ರಾಧಿಕಾರದ ಅಗ್ನಿಶಾಮಕ ಸೇವೆಗೆ ಸಂಬAಧಿಸಿದಂತೆ ಪೂರ್ಣವಾಗಿ ಅಥವಾ ಮುಖ್ಯವಾಗಿ ಅಂಥ ಸ್ಥಳೀಯ ಪ್ರಾಧಿಕಾರದಿಂದ ನಿಯೋಜಿತನಾಗಿದ್ದ ಪ್ರತಿಯೊಬ್ಬ ನಿಯೋಜಿತನು ಗೊತ್ತುಪಡಿಸಿದ ದಿವಸದಂದು ಮತ್ತು ಅಂದಿನಿಂದ ರಾಜ್ಯಸರ್ಕಾರದ ನಿಯೋಜಿತನಾಗತಕ್ಕುದು ಮತ್ತು ಅವನು. ರಾಜ್ಯ ಸರ್ಕಾರದ ಅಡಿಯಲ್ಲಿ ತನ್ನ ಪದವನ್ನು ಅದೇ ಅವಧಿ, ಅದೇ ಪರಿಶ್ರಮಧನ ಮತ್ತು ಅದೇ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಪಿಂಚಣಿ ಮತ್ತು ಉಪದಾನಕ್ಕೆ ಸಂಬಂಧಿಸಿದಂತೆ ಅದೇ ಹಕ್ಕುಗಳ ಮತ್ತು ವಿಶೇಷಾಧಿಕಾರ ಗಳೊಂದಿಗೆ ಮತ್ತು ಇತರ ವಿಷಯಗಳೊಂದಿಗೆ, ಅವುಗಳನ್ನು ಅಗ್ನಿಶಾಮಕ ಸೇವೆಗೆ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ರಾಜ್ಯಸರ್ಕಾರಕ್ಕೆ ವರ್ಗಾಯಿಸಿಲ್ಲದಿದ್ದರೆಮ ಅವನು ಅದರ ಅಡಿಯಲ್ಲಿ ಧಾರಣಮಾಡುತ್ತಿದ್ದಂತೆಯೇ ಧಾರಣಮಾಡತಕ್ಕುದು.

(2) ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ ವ್ಯಕ್ತಿಯು ಸ್ಥಳೀಯ ಪ್ರಾಧಿಕಾರದ ಪೂರ್ಣಕಾಲಿಕ ನಿಯೋಜಿತನಾಗಿದ್ದ ಯಾವನೇ ವ್ಯಕ್ತಿಯು ಅಥವಾ ಸ್ಥಳಿಯ ಪ್ರಾಧಿಕಾರದ ಅಗ್ನಿಶಾಮಕ ಸೇವೆಗೆ ಸಂಬಂಧಿಸಿದಂತೆ. ಯಾವನೇ ನಿಯೋಜಿತನಿಗೆ ಪೂರ್ಣವಾಗಿ ಅಥವಾ ಮುಖ್ಯವಾಗಿ

ನಿಯೋಜಿತನಾಗಿದ್ದನೋ ಹೇಗೆ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ ಆ ಪ್ರಶ್ನೆಯನ್ನು ರಾಜ್ಯಸರ್ಕಾರವು ತೀರ್ಮಾನಿಸತಕ್ಕುದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕುದು.

**22. ಸ್ವತ್ತು ಮತ್ತು ಅದಕ್ಕೆ ಸಂಬಂಧಿಸಿದ ದಸ್ತಾವೇಜುಗಳ ಸ್ವಾಧೀನವನ್ನು ವಶಾವಣೆ ಮಾಡಲು ಕರ್ತವ್ಯ.-** (1) 18ನೇ ಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ರಾಜ್ಯಸರ್ಕಾರಕ್ಕೆ ಸ್ವಾಧೀನ ಅಥವಾ ಅಭಿರಕ್ಷೆಯಲ್ಲಿ ಅಥವಾ ಯಾರ ನಿಯಂತ್ರಣದಲ್ಲಿ ಅಂಥ ಸ್ವತ್ತು ಇರಬಹುದೋ ಆ ಪ್ರತಿಯೊಬ್ಬ ವ್ಯಕ್ತಿಯು, ಕೂಡಲೇ ಅಂಥ ಆಸ್ತಿಯನ್ನು ರಾಜ್ಯ ಸರ್ಕಾರದವರಿಗೆ ಒಪ್ಪಿಸಿಕೊಡತಕ್ಕುದು. ಮತ್ತು ಅದನ್ನು ಹಾಗೆ ಒಪ್ಪಿಸಿಕೊಡುವವರೆಗೆ ಇಂಥ ವ್ಯಕ್ತಿಯು ಗೊತ್ತುಪಡಿಸಲಾದ ದಿನದಿಂದ ರಾಜ್ಯಸರ್ಕಾರದವರ ಪರವಾಗಿ ಇಂಥ ಆಸ್ತಿಯನ್ನು ಸ್ವಾಧೀನದಲ್ಲಿ ವಶಲದಲ್ಲಿ ಅಥವಾ ಹತೋಟಿಯಲ್ಲಿ ಇಟ್ಟುಕೊಂಡಿರುವನೆಂದು ಭಾವಿಸಲ್ಪಡತಕ್ಕುದು.

(2) ಗೊತ್ತುಪಡಿಸಿದ ದಿವಸದಂದು, 18ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲಾಗಿರುವಂಥ ಮತ್ತು ಅದರಲ್ಲಿ ನಿಹಿತವಾಗಿರುವಂಥ ಯಾವುದೇ ಪುಸ್ತಕಗಳು, ದಸ್ತಾವೇಜುಗಳು ಅಥವಾ ಇತರ ಕಾಗದ ಪತ್ರಗಳನ್ನು ಅವನ ಸ್ವಾಧೀನ ಅಥವಾ ಅಭಿರಕ್ಷೆಯಲ್ಲಿ ಅಥವಾ ಅವನ ನಿಯಂತ್ರಣದಲ್ಲಿ ಹೊಂದಿರುವ ಯಾವನೇ ವ್ಯಕ್ತಿಯು ಸದರಿ ಪುಸ್ತಕಗಳ ದಸ್ತಾವೇಜುಗಳ ಮತ್ತು ಕಾಗದ ಪತ್ರಗಳ ಬಗ್ಗೆ ರಾಜ್ಯಸರ್ಕಾರಕ್ಕೆ ಲೆಕ್ಕ ಕೊಡಲು ಹೊಣೆಗಾರನಾಗಿರತಕ್ಕುದು ಮತ್ತು ಅವುಗಳನ್ನು ರಾಜ್ಯಸರ್ಕಾರಕ್ಕೆ ಅಥವಾ ರಆಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿಗೆ ವಶಾವಣೆ ಮಾಡತಕ್ಕುದು.

(3) ಈ ಪ್ರಕರಣದಲ್ಲಿ ಅಡಕವಾದ ಇತರ ಉಪಬಂಧಗಳಿಗೆ ಬಾಧಕವಾಗದಂತೆ ಈ ಅಧ್ಯಾಯದ ಮೇರೆಗೆ ರಾಜ್ಯಸರ್ಕಾರಕ್ಕೆ ವರ್ಗಾಯಿಸಲಾದಂಥ ಅಥವಾ ಅದರಲ್ಲಿ ನಿಹಿತವಾದಂಥ ಎಲ್ಲ ಸ್ವತ್ತುಗಳ ಸ್ವಾಧೀನವನ್ನು ಪಡೆಯುವುದಕ್ಕಾಗಿ ಎಲ್ಲ ಅವಶ್ಯ ಕ್ರಮಗಳನ್ನು ಕೈಗೊಳ್ಳುವುದು ರಾಜ್ಯಸರ್ಕಾರಕ್ಕೆ ಕಾನೂನು ಸಮ್ಮತವಾಗಿರತಕ್ಕುದು.

## ಅಧ್ಯಾಯ - VI

## ದಂಡನೆಗಳು

**23. ಕರ್ತವ್ಯದ ಉಲ್ಲಂಘನೆಗಾಗಿ ದಂಡನೆ ಇತ್ಯಾದಿ.-** ದಳದ ಯಾವನೇ ಸದಸ್ಯನು

(ಎ) 'ಕರ್ತವ್ಯದ ಯಾವುದೇ ಉಲ್ಲಂಘನೆಯ ಬಗ್ಗೆ ಅಥವಾ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಯಾವುದು ಉಪಬಂಧವನ್ನು ಬುದ್ಧಿ ಪೂರ್ವಕವಾಗಿ ಉಲ್ಲಂಘಿಸಿದ ಬಗ್ಗೆ ತಪ್ಪಿತಸ್ಥನೆಂದು ಕಂಡುಬಂದರೇ.

(ಬಿ) ಹೇಡಿತನದ ಬಗ್ಗೆ ತಪ್ಪಿತಸ್ಥನೆಂದು ಕಂಡುಬಂದರೆ; ಅಥವಾ

(ಸಿ) ತನ್ನ ಪದದ ಕರ್ತವ್ಯಗಳಿಂದ ಅನುಮತಿ ಇಲ್ಲದೆ ಅಥವಾ ಕನಿಷ್ಟ ಪಕ್ಷ **ರದುಡ** ತಿಂಗಳುಗಳ ಪೂರ್ವಭಾವಿ ನೋಟೀಸನ್ನು ಕೊಡದೇ ಹಿಂತೆಗೆದರೆ; ಅಥವಾ

(ಡಿ) ರಜೆಯ ಮೇಲೆ ಗೈರು ಹಾಜರಾಗಿದ್ದು ಅಂಥ ರಜೆಯು ಮುಕ್ತಾಯವಾದ ಮೇಲೆ ಯುಕ್ತ ಕಾರಣವಿಲ್ಲದೆ ತನ್ನ ಕೆಲಸಕ್ಕೆ ಹಾಜರಾಗಲು ತಪ್ಪಿದರೆ; ಅಥವಾ

(ಇ) 28ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಇತರ ನಿಯೋಜನೆ ಅಥವಾ ಪದವನ್ನು ಅಂಗೀಕರಿಸಿದರೆ,

ಅವನು ಮೂರು ತಿಂಗಳಿಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಅಂಥ ಸದಸ್ಯರ ಮೂರು ತಿಂಗಳ ವೇತನವನ್ನು ಮೀರದ ಮೊಬಲಗಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲು ದಂಡನೀಯನಾಗತಕ್ಕುದು.

[1][23ಎ. ದ್ರೋಹ ಇತ್ಯಾದಿಗಳನ್ನು ಉಂಟುಮಾಡುವುದಕ್ಕಾಗಿ ದಂಡ .- (1) ಯಾವನೇ ವ್ಯಕ್ತಿಯು, ಭಾರತದಲ್ಲಿ ವಿಧಿಬದ್ಧವಾಗಿ ಸ್ಥಾಪಿತವಾದ ಸರಕಾರದ ಬಗ್ಗೆ ದಳದವರಲ್ಲಿ ಉದ್ದೇಶಪೂರ್ವಕವಾಗಿ ದ್ರೋಹವನ್ನುಂಟು ಮಾಡಿದರೆ ಅಥವಾ ಉಂಟುಮಾಡಲು ಯತ್ನಿಸಿದರೆ ಅಥವಾ ಹಾಗೆ ದ್ರೋಹ ಉಂಟುಮಾಡುವ ಸಂಭವವಿರುವುದೆಂದು ತಾನು ತಿಳಿದೂ ಯಾವುದೇ ಕೃತ್ಯವನ್ನು ಮಾಡಿದರೆ, ಅಥವಾ ಯಾವನೇ ದಳದವನು ತನ್ನ ಸೇವೆಯಿಂದ ಪರಾನ್ಮುಖನಾಗುವಂತೆ ಹಿಂತೆಗೆದುಕೊಳ್ಳುವಂತೆ ಅಥವಾ ಶಿಸ್ತುಭಂಗ ಮಾಡುವಂತೆ ಅವನನ್ನು ಪ್ರೇರೇಪಿಸಿದರೆ ಅಥವಾ ಪ್ರೇರೇಪಿಸುವಂತೆ ಯತ್ನಿಸಿದರೆ, ಅಥವಾ ಹಾಗೆ ಪ್ರೇರೇಪಿಸುವ ಸಂಭವವಿರುವುದೆಂದು ತಾನು ತಿಳಿದೂಯಾವುದೇ ಕೃತ್ಯವನ್ನು ಮಾಡಿದರೆ, ಆರು ತಿಂಗಳ ಅವಧಿಯ ವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**ವಿವರಣೆ:-** ಸರಕಾರದ ಯಾವುದೇ ಕ್ರಮಗಳನ್ನು ವಿಧಿಬದ್ಧ ರೀತಿಯಲ್ಲಿ ಬದಲಾವಣೆ ಮಾಡಿಸುವ ಉದ್ದೇಶದಿಂದ ಆ ಬಗ್ಗೆ ಅಸಮ್ಮತಿಯನ್ನು ಅಥವಾ ಸರಕಾರದ ಆಡಳಿತಾತ್ಮಕ ಅಥವಾ ಇತರ ಕ್ರಮದ ಬಗ್ಗೆ ಅಸಮ್ಮತಿಯನ್ನು ವ್ಯಕ್ತಪಡಿಸುವಿಕೆಗಳು, ದ್ರೋಹವನ್ನುಂಟು ಮಾಡುವ ಅಥವಾ ಉಂಟು ಮಾಡುವ ಉದ್ದೇಶವಿರುವ ಅಥವಾ ಉಂಟುಮಾಡಬಹುದಾಗಿದ್ದ ಹೊರತು, ಈ ಪ್ರಕರಣದ ಮೇರೆಗೆ ಅಪರಾಧವಾಗುವುದಿಲ್ಲ.][1]

1.1994ರ ಅಧಿನಿಯಮ 40ರ ಮೂಲಕ 10.10.194ರಿಂದ ಜಾರಿಗೆಬರುವಂತೆ ಸೇರಿಸಲಾಗಿದೆ.

**24. ಮಾಹಿತಿಯನ್ನು ಕೊಡಲು ತಪ್ಪುವುದು.-** 37ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಬೆಂಕಿಯು ತಲೆದೋರಿರುವುದರ ಬಗ್ಗೆ ತನಗೆ ಗೊತ್ತಿರುವ ಮಾಹಿತಿಯನ್ನು ನ್ಯಾಯ ಸಮ್ಮತ ಕಾರಣವಿಲ್ಲದೆ ತಿಳಿಸಲು ತಪ್ಪುವ ಯಾವನೇ ವ್ಯಕ್ತಿಯು ಒಂದು ತಿಂಗಳವರೆಗೆ ವಿಸ್ತರಿಸಬಹುದಾದಂಥ ಸಾದಾ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**25. ಮುನ್ನೆಚ್ಚರಿಕೆ ತೆಗೆದುಕೊಳ್ಳಲು ತಪ್ಪುವುದು.-** 13ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ಅಗತ್ಯತೆಗಳನ್ನು ಅಥವಾ ಆ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಹೊರಡಿಸಿದ ಯುಕ್ತ ಕಾರಣವಿಲ್ಲದೇ ಪಾಲಿಸಲು ತಪ್ಪುವ ಯಾರೇ ಆಗಲಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**26. ಅಗ್ನಿಶಾಮಕ ಕಾರ್ಯಾಚರಣೆಗಳಿಗೆ ಬುದ್ಧಿಪೂರ್ವಕವಾಗಿ ಅಡ್ಡಿಯನ್ನುಂಟು ಮಾಡುವುದು.-** ಅಗ್ನಿ ಶಾಮಕ ಕಾರ್ಯಾಚರಣೆಗಳಲ್ಲಿ ತೊಡಗಿರುವ ದಳದ ಯಾವನೇ ಸದಸ್ಯನಿಗೆ ಬುದ್ಧಿಪೂರ್ವಕವಾಗಿ ಅಡ್ಡಿಯನ್ನುಂಟು ಮಾಡುವ ಅಥವಾ ಅವನ ಮಧ್ಯ ಪ್ರವೇಶಿಸುವ ಯಾವನೇ ವ್ಯಕ್ತಿಯು ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**27. ಸುಳ್ಳು ವರದಿ.-** ಬೆಂಕಿಯು ತಲೆದೋರಿರುವುದರ ಬಗ್ಗೆ ಹೇಳಿಕೆ ಸಂದೇಶ ಅಥವಾ ಇತರೆ ರೀತಿಯಲ್ಲಿ ಅಂಥ ವರದಿಯನ್ನು ಸ್ವೀಕರಿಸಲು ಅಧಿಕೃತನಾದ ಯಾವನೇ ವ್ಯಕ್ತಿಗ ತಿಳಿದೂ ತಿಳಿದೂ ಸುಳ್ಳು ವರದಿಯನ್ನು ಕೊಡುವ ಅಥವಾ ಕೊಡುವಂತೆ ಮಾಡುವ ಯಾವನೇ ವ್ಯಕ್ತಿಯು, ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲು ದಂಡನಿಯನಾಗತಕ್ಕುದು.

## ಅಧ್ಯಾಯ - VII

## ಸಾಮಾನ್ಯ ಹಾಗೂ ಸಂಕೀರ್ಣ

**28. ಇತರ ನಿಯೋಜನೆಗೆ ಪ್ರತಿಷೇಧ.–** ದಳದ ಯಾವನೇ ಸದಸ್ಯನು ಈ ಅಧಿನಿಯಮದ ಮೇರೆಗಿನ ತನ್ನ ಕರ್ತವ್ಯಗಳನ್ನು ಬಿಟ್ಟು ಬೇರೆ ಯಾವುದೇ ನಿಯೋಜನೆ ಅಥವಾ ಪದದಲ್ಲಿ ತೊಡಗತಕ್ಕುದಲ್ಲ.

**29. ಇತರ ಪ್ರದೇಶಕ್ಕೆ ವರ್ಗಾವಣೆ.-** ನಿರ್ದೇಶಕ ಅಥವಾ ಈ ಬಗ್ಗೆ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು. ಈ ಅಧಿನಿಯಮವು ಜಾರಿಯಲ್ಲಿ ಇರದಂಥ ಯಾವುದೇ ನೆರೆಹೊರೆಯ ಪ್ರದೇಶದಲ್ಲಿ ಬೆಂಕಿ ಅಥವಾ ಇತರ ತುರ್ತು ಸಂದರ್ಭದಲ್ಲಿ ಅಂಥ ನೆರೆಹೊರೆಯ ಪ್ರದೇಶದಲ್ಲಿ ಅಗ್ನಿಶಾಮಕ ಕಾರ್ಯಾಚರಣೆಗಳನ್ನು ನಡೆಸಲು ಅವಶ್ಯ ಉಪಕರಣಗಳು ಮತ್ತು ಸಾಧನ ಸಾಮಗ್ರಿಗಳೊಂದಿಗೆ ದಳದ ಸದಸ್ಯರುಗಳನ್ನು ಕಳುಹಿಸುವಂತೆ ಆದೇಶಿಸಬಹುದು, ಮತ್ತು ಆ ತರುವಾಯ 1ನೇಯ ಪ್ರಕರಣದ (3) ನೆಯ ಉಪ ಪ್ರಕರಣದ ಉಪಬಂಧಗಳಲ್ಲಿ ಏನೇ ಇದ್ದಾಗ್ಯೂ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ಅಧಿನಿಯಮಗಳ ಎಲ್ಲ ಉಪಬಂಧಗಳು ಬೆಂಕಿಯು ಬಿದ್ದಿರುವ ಅವಧೀಯಲ್ಲಿ ಅಥವಾ ತುರ್ತು ಪರಿಸ್ಥಿತಿಯಲ್ಲಿ ಅಥವಾ ನಿರ್ದೇಶಕನು ನಿರ್ದಿಷ್ಟಪಡಿಸಬಹುದಾದಂಥ ಅವಧಿಯಲ್ಲಿ ಅಂಥ ಪ್ರದೇಶಕ್ಕೆ ಅನ್ವಯವಾಗತಕ್ಕುದು.

**30. ಇತರ ಕರ್ತವ್ಯಗಳ ಮೇಲೆ ನಿಯೋಜನೆ.-** ರಾಜ್ಯ ಸರ್ಕಾರಕ್ಕೆ ಅಥವಾ ಈ ಬಗ್ಗೆ ಅದು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಗೆ ದಳವನ್ನು ಅದರ ತರಬೇತಿಯ ಉಪಕರಣಗಳು ಮತ್ತು ಸಾಧನ ಸಾಮಗ್ರಿ ಕಾರಣದಿಂದಾಗಿ ಅದಕ್ಕೆ ಸೂಕ್ತವಾದಂಥ ರಕ್ಷಣೆ ಅಥವಾ ಕಾಪಾಡುವುದು ಅಥವಾ ಇತರ ಕೆಲಸಕ್ಕಾಗಿ ನಿಯೋಜಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

**31. ನಷ್ಟಪರಿಹಾರವನ್ನು ಸಂದಾಯ ಮಾಡಲು ಸ್ವತ್ತಿನ ಒಡೆಯ ಹೊಣೆಗಾರಿಕೆ.-** (1) ತಾನೇ ಆಗಿ ಅಥವಾ ಅವನ ಏಜೆಂಟನು ಉದ್ದೇಶಪೂರ್ವಕವಾಗಿ ಅಥವಾ ಉಪೇಕ್ಷೆಯಿಂದ ಮಾಡಿದ ಯಾವುದೇ

ಕಾರ್ಯದಿಂದಾಗಿ ಅವನ ಸ್ವತ್ತಿಗೆ ಬೆಂಕಿ ಹತ್ತಿದರೆ ಯಆವನೇ ವ್ಯಕ್ತಿಯು. ಈ ಅಧಿನಿಯಮದ 10ನೇ ಪ್ರಕರಣದ ಮೇರೆಗೆ ಅದರಲ್ಲಿ ನಮೂದಿಸಿದ ಯಾವನೇ ಅಧಿಕಾರಿಯು ಅಥವಾ ಅಂಥ ಅಧಿಕಾರಿಯ ಅಧಿಕಾರದ ಮೇರೆಗೆ ಕೆಲಸಮಾಡುದ ಯಾವನೇ ವ್ಯಕ್ತಿಯು ಕಯಗೊಂಡ ಯಾವುದೇ ಕಾರ್ಯದಿಂದಾಗಿ ಯಾವನೇ ಇತರ ವ್ಯಕ್ತಿಯು ಅವನ ಸ್ವತ್ತಿನ ಬಗ್ಗೆ ಹಾಣಿಯನ್ನು ಅನುಭವಿಸುವುದರ ಬಗ್ಗೆ ನಷ್ಟ ಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕುದು.

(2) (1)ನೇಯ ಉಪ-ಪ್ರಕರಣದ ಮೇರೆಗಿನ ಎಲ್ಲಾ ಕ್ಲೇಮುಗಳನ್ನು ಹಾನಿಯುಂಟಾದ ದಿನಾಂಕದಿAದ ಮೂವತ್ತು ದಿವಸಗಳೊಳಗಾಗಿ ಡೆಪ್ಯೂಟಿ ಕಮೀಷನರಿಗೆ ಸಲ್ಲಿಸ ತಕ್ಕುದು.

(3) ಡೆಪ್ಯೂಟಿ ಕಮೀಷನರನು ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಸಲ್ಲತಕ ನಷ್ಟ ಪರಿಹಾರದ ಮೊಬಲಗನ್ನು ನಿರ್ಧರಿಸತಕ್ಕುದು ಮತ್ತು ಅಂಥ ಮೊಬಲಗನ್ನು ಮತ್ತು ಅದಕ್ಕೆ ಹೊಣೆಗಾರನಾದ ವ್ಯಕ್ತಿಯನ್ನು ತಿಳಿಸುವ ಆದೇಶವ್ನು ಮಾಡತಕ್ಕದ್ದು ಮತ್ತು ಹಾಗೆ ಮಾಡಿದ ಆದೇಶವು ಸಿವಿಲ್ ನ್ಯಾಯಾಲಯದ ಡಿಕ್ರಿಯ ಬಲವನ್ನು ಹೊಂದಿರತಕ್ಕುದು.,

**32. ಮಾಹಿತಿಯನ್ನು ಪಡೆಯಲು ಅಧಿಕಾರ.–** ಅಗ್ನಿಶಾಮಕ ಠಾಣೆಯ ಪ್ರಬಾರದಲ್ಲಿರುವ ಅಧಿಕಾರಿಯ ದರ್ಜೆಗಿಂತ ಕಡಿಮೆ ಇಲ್ಲದ ದಳದ ಯಾವನೇ ಅಧಿಕಾರಿಯು, ಈ ಅಧಿನಿಯಮದ ಮೇರೆಗೆ ಅವನ ಕರ್ತವ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಯಾವುದೇ ಕಟ್ಟಡ ಅಥವಾ ಇತರೆ ಸ್ವತ್ತಿನ ಒಡೆಯ ಅಥವಾ ಅಧಿಭೋಗದಾರನು ಅಂಥ ಕಟ್ಟಡದ ಅಥವಾ ಇತರ ಸ್ವತ್ತಿನ ಸ್ವರೂಪಕ್ಕೆ ಲಬ್ಯವಿರಬಹುದಾದ ನೀರು ಸರಬರಾಜು ಮತ್ತು ಅದಕ್ಕೆ ಪ್ರವೇಶ ಅವಕಾಶದ ಸಾಧನ ಮತ್ತು ಇತರ ಮುಖ್ಯ ವಿವರಗಳು ಇವುಗಳಿಗೆ ಸಂಬAಧಿಸಿದಂತೆ ಮಾಹಿತಿಯನ್ನು ಒದಗಿಸಲು ಅಗತ್ಯಪಡಿಸಬಹುದು ಮತ್ತು ಅಂಥ ಒಡೆಯ ಅಥವಾ ಅಧಿಭೋಗದಾರನು ತನ್ನ ಬಳಿ ಇರುವ ಎಲ್ಲ ಮಾಹಿತಿಗಳನ್ನು ಒದಗಿಸತಕ್ಕುದು.

**33. ಪ್ರವೇಶಾಧಿಕಾರಿ.-** (1) ನಿರ್ದೇಶಕನು ಅಥವಾ ಈ ಬಗ್ಗೆ ಅವನು ಅಧಿಕೃತ ಗೊಳಿಸಿದ ದಳದ ಯಾವನೇ ಸದಸ್ಯನು ಅಂಥ ಸ್ಥಳದಲ್ಲಿ ಬೆಂಕಿಯ ವಿರುದ್ದ ಕೈಗೊಳ್ಳ ಬೇಕಾದ ಮುನ್ನೆಚ್ಚರಿಕೆಗಳನ್ನು ಹಾಗೆ ಕೈಗೊಳ್ಳಲಾಗಿದೆಯೋ ಹೇಗೆ ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ 13ನೇಯ ಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಸ್ಥಳವನ್ನು ಪ್ರವೇಶಿಸಬಹುದು.

(2) ಈ ಅಧಿಸೂಚನೆಯಲ್ಲಿ ವ್ಯಕ್ತವಾಗಿ ಅನ್ಯಥಾ ಉಪಬಂಧಿಸಿದ್ದ ಹೊರತು., 1ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಪ್ರವೇಶದಿಂದ ಅವಶ್ಯವಾಗಿ ಉಂಟಾದ ಯಾವುದೇ ಹಾನಿಯ ಬಗ್ಗೆ ನಷ್ಟ ಪರಿಹಾರಕ್ಕಾಗಿ ಯಾವನೇ ವ್ಯಕ್ತಿಯ ವಿರುದ್ದ ಯಾವುದೇ ಕ್ಲೇಮನ್ನು ಹೂಡತಕ್ಕುದಲ್ಲ.

**34. ನೀರಿನ ಬಳಕೆ.–** ದಳವು ಅಗ್ನಿ ಶಾಮಕ ಕಾರ್ಯಾಚರಣೆಗಳಲ್ಲಿ ಬಳಸಿದ ನೀರಿಗಾಗಿ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಇತರ ವ್ಯಕ್ತಿಯು ಯಾವುದೇ ವೆಚ್ಚ ವನ್ನು ಹೊರಿಸತಕ್ಕುದ್ದಲ್ಲ.

**35. ನೀರು ಸರಬರಾಜಿನ ತಡೆಗಾಗಿ ಯಾವುದೇ ನಷ್ಟ ಪರಿಹಾರವಿಲ್ಲ.-** ಯಾವುದೇ ಪ್ರದೇಶದಲ್ಲಿ ನೀರಿನ ಸರಬರಾಜಿನ ಹೊಣೆ ಯಾವುದೇ ಪ್ರಾಧಿಕಾರವು 10ನೇಯ ಪ್ರಕರಣದ (ಗ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅಗತ್ಯತೆಯನ್ನು ಅಂಥ ಪ್ರಾಧಿಕಾರವು ಪಾಲಿಸುವಿಕೆಯ ಮಾತ್ರದಿಂದಲೇ

ಉಂಟಾದ ನೀರು ಸರಬರಾಜಿನ ಯಾವುದೇ ತಡೆಯ ಕಾರಣದಿಂದ ಉಂಟಾದ ಹಾನಿಗಾಗಿನ ಯಾವುದೇ ಪರಿಹಾರಕ್ಕಾಗಿ ಯಾವುದೇ ಕ್ಲೇಮಿಗೆ ಹೊಣೆಯಾಗತಕ್ಕುದಲ್ಲ.

**36. ಪೋಲಿಸು ಅಧಿಕಾರಿಗಳು ನೆರವು ನೀಡಬೇಕು.-** ಈ ಅಧಿನಿಯಮದ ಮೇರೆಗಿನ ದಳದ ಸದಸ್ಯರ ಕರ್ತವ್ಯಳ ನಿರ್ವಹಣೆಯಲ್ಲಿ ಅವರಿಗೆ ನೆರವು ನೀಡುವುದು ಎಲ್ಲ ದರ್ಜೆಯ ಪೊಲೀಸು ಅಧಿಕಾರಿಗಳ ಕರ್ತವ್ಯವಾಗಿರತಕ್ಕದ್ದು.

**37. ಬೆಂಕಿ ತಲೆದೋರಿದ ಮೇಲೆ ಮಾಹಿತಿ.-** ಬೆಂಕಿಯು ತಲೆದೋರಿದುದರ ಬಗೆಗಿನ ಯಾವುದೇ ಮಾಹಿತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯು ಅದನ್ನು ವಿಳಂಬ ವಿಲ್ಲದೇ ಅತ್ಯಂತ ಸಮೀಪದಲ್ಲಿರುವ ಅಗ್ನಿಶಾಮಕ ಠಾಣೆಗೆ ತಿಳಿಸಕ್ಕುದು.

**38. ದಂಡ ರಕ್ಷಣೆ.-** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಅನುಸರಣೆಯಲ್ಲಿ ಸದ್ಭಾವದಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕಾಗಿ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ. ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹಾರಣೆಗಳನ್ನು ಹೂಡತಕ್ಕುದ್ದಲ್ಲ.

**39. ನಿಯಮ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಕೊಡುವ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು-

(ಕ) ದಳದ ಅಧಿಕಾರಿಗಳ ಮತ್ತು ಸದಸ್ಯರ ಸಂಖ್ಯೆ ಮತ್ತು ಗ್ರೇಡುಗಳು:

(ಖ) ದಳದ ಸದಸ್ಯರ ನೇಮಕಾತಿಯ ರೀತಿ;

(ಗ) ದಳದ ಸದಸ್ಯರಿಗೆ ಕೊಡಬೇಕಾದ ಪ್ರಮಾಣ ಪತ್ರದ ನಮೂನೆ;

(ಘ) ದಳದ ಸದಸ್ಯರ ದರ್ಜೆಗಳು, ವೇತನ ಮತ್ತು ಭತ್ಯಗಳು, ಕೆಲಸದ ವೇಳೆಗಳು ಮತ್ತು ರಜೆಯನ್ನೊಳಗೊಂಡು-ಅವರು ಸೇವಾ ಷರತ್ತುಗಳು, ಶಿಸ್ತುಪಾಲನೆ ಮತ್ತು ಸೇವೆಯಿಂದ ತೆಗೆದುಹಾಕುವುದು;

(ಙ) ಯಾವ ಸಂದರ್ಭಗಳಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ದಳದ ಸದಸ್ಯರನ್ನು ನೆರೆಹೊರೆಯ ಪ್ರದೇಶಗಳಲ್ಲಿ ಅಗ್ನಿಶಾಮಕ ಕಾರ್ಯಾಚರಣೆಗಳನ್ನು ನಡೆಸಲು ಕಳುಹಿಸಬಹುದು.

(ಚ) ಯಾವ ಷರತ್ತುಗಳಿಗೆ ಒಳಪಟ್ಟು ದಳದ ಸದಸ್ಯರನ್ನು, ರಕ್ಷಣೆಯ ಕಾಪಾಡುವಿಕೆ ಅಥವಾ ಇತರ ಕೆಲಸದ ಮೇಲೆ ನಿಯೋಜಿಸಬಹುದು;

(ಛ) ಯಾವ ರೀತಿಯಲ್ಲಿ ಮತ್ತು ಯಾವ ಅವಧಿಯ ಅಂತರಗಳಲ್ಲಿ ಈ ಅಧಿನಿಯಮದ ಮೇರೆಗೆ ವಿಧಿಸಿದ ಬೆಂಕಿ ತೆರಿಗೆಯ ಉತ್ಪತ್ತಿಗಳನ್ನು ರಾಜ್ಯ ಸರ್ಕಾರಕ್ಕೆ ಸಂದಾಯಮಾಡತಕ್ಕದ್ದು;

(ಜ) ಈ ಅಧಿನಿಯಮದ ಮೇರೆಗೆ ನೋಟೀಸನ್ನು ಜಾರಿ ಮಾಡುವ ರೀತಿ;

(ಝ) ಸ್ಥಳೀಯ ಪ್ರಾಧಿಕಾರವು ಇಟ್ಟುಕೊಂಡು ಬಂದ ಅಗ್ನಿಶಾಮಕ ಸೇವೆಗೆ ಯಾವುದೇ ಸ್ವತ್ತು ಸಂಭಂಧಿಸಿದೆಯೋ ಹೇಗೆ ಅಥವಾ ಅಗ್ನಿಶಾಮಕ ಸೇವೆಯ ಉದ್ದೇಶಗಳಿಗಾಗಿ ಸ್ಥಳೀಯ ಪ್ರಾಧಿಕಾರವು ಯಾವುದೇ ಹಕ್ಕುಗಳು,ಅಧಿಕಾರಿಗಳು, ಹೊಣೆಗಾರಿಕೆಗಳು ಅಥವಾ ಬ್ಯಾಧತೆಗಳನ್ನು ಅರ್ಜಿಸಿದೆಯೋ ಅಥವಾ ವಹಿಸಿದೆಯೋ ಹೇಗೆ ಅಥವಾ ಯಾವುದೇ ಕರಾರನ್ನು ಅಥವಾ ಒಪ್ಪಂದವನ್ನು ಅಥವಾ ಇತರ ಲಿಖಿತವನ್ನು ಮಾಡಿಕೊಂಡಿದೆಯೋ ಹೇಗೆ ಅಥವಾ ಯಾವುದೇ ದಸ್ತಾವೇಜುಗಳು ಆ ಉದ್ದೇಶಗಳಿಗೆ ಸಂಬಂಧಪಟ್ಟಿವೆಯೋ ಹೇಗೆ ಎಂಬ ಪ್ರಶ್ನೆಯನ್ನು ನಿರ್ಧರಿಸುವುದಕ್ಕಾಗಿ;

(ಞ) ಅಗ್ನಿಶಾಮಕ ಉದ್ದೇಶಗಳಿಗಾಗಿ ಸೇವೆ ಸಲ್ಲಿಸಿದ ದಳದ ಸದಸ್ಯರಲ್ಲದ ವ್ಯಕ್ತಿಗಳಿಗೆ ಬಹುಮಾನಗಳ ಸಂದಾಯ

(ಟ) ಕರ್ತವ್ಯದಲ್ಲಿ ತೊಡಗಿರುವಾಗ ಅಪಘಾತಗಳ ಸಂದರ್ಭದಲ್ಲಿ ದಳದ ಸದಸ್ಯರಿಗೆ ಅಥವಾ ಮರಣದ ಸಂದರ್ಭದಲ್ಲಿ ಅವರ ಅವಲಂಬಿತರಿಗೆ ಸಂದಾಯ ಮಾಡ ಪರಿಹಾರ;

(ಠ) ಪ್ರದೇಶದ ಹೊರಗಡೆ ಅಥವಾ ವಿಶೇಷ ಸೇವೆ ಮೇಲೆ ದಳದ ಸದಸ್ಯರ ನಿಯೋಜನೆ ಅಥವಾ ಯಾವುದೇ ಸಾಧನ ಸಾಮಗ್ರಿಗಳ ಉಪಯೋಗ ಮತ್ತು ಅದಕ್ಕಾಗಿ ಸಂದಾಯ ಮಾಡಬೇಕಾದ ಫೀಜು; ಮತ್ತು

(ಡ) ನಿಯಮಿಸಬೇಕಾ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ;

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ರಾಜ್ಯದ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಎತಕ್ಕದ್ದು; ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ಅದಕ್ಕೆ ನಿಕಟೋತ್ತರ ಅಧೀವೇಶನದ ಮುಕ್ತಾಯಕ್ಕೆ ಮುಂದೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡು ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡು ಸದಸ್ಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದ್ದಲ್ಲ, ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

**40. ನಿರಸನ ಮತ್ತು ಉಳಿಸುವಿಕೆ.-** (1) ಒಂದು ಪ್ರದೇಶದಲ್ಲಿ ಈ ಅಧಿನಿಯಮವು ಜಾರಿಯಲ್ಲಿ ಬರುವಂಥ ದಿವಸಕ್ಕೆ ನಿಕಟಪೂರ್ವದಲ್ಲಿ, ಆ ಪ್ರದೇಶದಲ್ಲಿ ಈ ಅಧಿನಿಯಮದ ಯಾವುದೇ ಉಪಬಂಧಕ್ಕೆ ಸಂವಾದಿಯಾಗುವAಥ ಕಾನೂನಿನ ಬಲಹೊಂದಿದAಥ ಯಾವುದೇ ಕಾನೂನು, ನಿಯಮ, ವಿನಿಯಮ

ಅಥವಾ ಉಪವಿಧಿ ಜಾರಿಯಲ್ಲಿದ್ದರೆ ಅಂಥ ಕಾನೂನು, ನಿಯಮ, ವಿನಿಯಮ ಅಥವಾ ಉಪವಿಧಿಯು ಯಾವ ವಿಷಯಕ್ಕೆ ಸಂಬAಧಿಸಿದAತೆ ಉಪಬಂಧವನ್ನು ಮಾಡಲಾಗಿದೆಯೊ ಆ ಯಾವುದೇ ವಿಷಯಕ್ಕೆ ಅದು ಸಂಬAಧಪಡುವಷ್ಟರ ಮಟ್ಟಿಗೆ ಆ ದಿವಸದಂದು ನಿರಸನವಾಗತಕ್ಕದ್ದು.

(2) (1)ನೆಯ ಉಪ ಪ್ರಕರಣದ ಮೂಲಕ ಯಾವುದೇ ಕಾನೂನು, ನಿಯಮ ವಿನಿಯಮ ಅಥವಾ ಉಪವಿಧಿಯ ನಿರಸನಗೊಳಿಸಿದ್ದಾಗ್ಯೂ, ಅಂಥ ಪ್ರಾಧಿಕಾರವನ್ನು ನಿಯಂತ್ರಿವ ಕಾನೂನಿನ ಮೇರೆಗೆ ಯಾವುದೇ ಸ್ಥಳೀಯ ಪ್ರಾಧಿಕಾರದ ಸಾಮಾನ್ಯ ಜವಾಬ್ದಾರಿಯು ಅಂಥ ಕಾನೂನು ಸ್ಥಳೀಯ ಪ್ರಾಧಿಕಾರವನ್ನು-

(ಕ) ರಾಜ್ಯ ಸರ್ಕಾರದವು ಕಾಲಕಾಲಕ್ಕೆ ನಿರ್ದೇಶನಿಸಬಹುದಾದಂಥ ಅಗ್ನಿಶಾಮಕ ಉದ್ದೇಶಗಳಿಗಾಗಿ ಅಂಥ ನೀರು ಸರಬರಾಜು ಮತ್ತು ಅಗ್ನಿಶಾಮಕ ನೀರೆತ್ತುವ ಕೊಳವೆಗಳನ್ನು ಒದಗಿಸಲು ಮತ್ತು ಅವುಗಳನ್ನು ಇಟ್ಟುಕೊಂಡು ಬರಲು;

(ಖ) ಅಪಾಯಕಾರಿ ವೃತ್ತಿಗಳನ್ನು ನಿಯಂತ್ರಿಸುವುದಕ್ಕಾಗಿ ಉಪವಿಧಿಗಳನ್ನು ರಚಿಸಲು;

(ಗ) ದಳದ ಯಾವೇ ಸದಸ್ಯನು ಹಾಗೆ ಮಾಡಲು ಯುಕ್ತವಾಗಿ ಕೋರಿದಾಗ ಬೆಂಕಿಯನ್ನು ಆರಿಸಲು ನೆರವು ನೀಡಲು ಅದರ ಯಾವನೇ ನಿಯೋಜಿತನಿಗೆ ಆದೇಶಿಸಲು ; ಮತ್ತು

(ಘ) ಸಾಮಾನ್ಯವಾಗಿ ಬೆಂಕಿಯುಂಟಾಗುವ ಸಂಭವವನ್ನು ಕಡಿಮೆ ಮಾಡುವ ಅಥವಾ ಬೆಂಕಿ ಹರಡುವಿಕೆಯನ್ನು ತಡೆಗಟ್ಟುವಂಥ ಕ್ರಮಗಳನ್ನು ಕೈಗೊಳ್ಳಲು ಸ್ಥಳೀಯ ಪ್ರಾಧಿಕಾರವನ್ನು ಅಗತ್ಯ ಪಡಿಸುವಷ್ಟರ ಮಟ್ಟಿಗೆ ಪರಿಮಿತವಾಗಿದೆ ಅಥವಾ ಮಾರ್ಪಾಟಾಗಿದೆ ಎಂದು ಭಾವಿಸತಕ್ಕುದ್ದಲ್ಲ.

*****

**ಕರ್ನಾಟಕ ಅಧಿನಿಯಮ 1964ರ ಸಂಖ್ಯೆ 42**

**ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964**

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**

**ಅಧಿಸೂಚನೆ ಕ್ರಮಾಂಕ ನಂ. ಲಾ 19 ಎಲ್‌ಎಂಪಿ 88, ದಿನಾಂಕ:24ನೇ ಸೆಪ್ಟೆಂಬರ್ 1988**

**[25ನೇ ಮೇ 2000]**

ಕರ್ನಾಟಕ ರಾಜಭಾಷಾ ಅಧಿನಿಯಮ, 1963 1963ರ ಕರ್ನಾಟಕ ಅಧಿನಿಯಮ 26)ರ 5-ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ಶ್ರೀ ಪಿ. ವೆಂಕಟಸುಬ್ಬಯ್ಯ ಎಂಬ ನಾನು, ಕನ್ನಡ ಭಾಷೆಯಲ್ಲಿರುವ ಕರ್ನಾಟಕ ಅಗ್ನಿಶಾಮಕದಳ ಅಧಿನಿಯಮ, 1964-ಇದು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕುದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಪಿ. ವೆಂಕಟಸುಬ್ಬಯ್ಯ**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಅರ್ಜುನಪ್ಪ**

ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ
(ಪ್ರಕಟಣೆಗಳು)

**ಅಧಿಸೂಚನೆಗಳು**

**ಟಿಪ್ಪಣಿ.-** ಕರ್ನಾಟಕ ಅಗ್ನಿಶಾಮಕ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42)ರ 1ನೇ ಪ್ರಕರಣದ (3)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯ ಸರ್ಕಾರವು ಸದರಿ ಅಧಿನಿಯಮವನ್ನು ರಾಜ್ಯದ ವಿವಿಧ ಪ್ರದೇಶಗಳಲ್ಲಿ ವಿವಿಧ ಅಧಿಸೂಚನೆಗಳನ್ನು ಮತ್ತು ವಿವಿಧ ದಿನಾಂಕಗಳಿಂದ ಜಾರಿಗೆ ಬರುವಂತೆ ಜಾರಿಗೆ ತಂದಿದೆ. ಅಧಿನಿಯಮವು ಕೆಳಗಿನ ಕೋಷ್ಟಕದ ಕಾಲಂ (2)ರಲ್ಲಿ ನಮೂದಿಸಲಾದ ದಿನಾಂಕದಿಂದ ಜಾರಿಗೆ ಬರುವಂತೆ ಮತ್ತು ಅದರ ಕಲಂ (3) ಹಾಗೂ (4)ರಲ್ಲಿ ಸಂಬಂಧಿಸಿದ ನಮೂದುಗಳಲ್ಲಿ ನಮೂದಿಸಲಾದ ಅಧಿಸೂಚನೆಗಳ ಮೂಲಕ ಜಾರಿಗೆ ತರಲಾಗಿದೆ.

**ಕೋಷ್ಟಕ**

| ಕ್ರ. ಸಂ. | ಪ್ರದೇಶ | ಜಾರಿಗೆ ಬಂದ ದಿನಾಂಕ | ಅಧಿಸೂಚನೆ ದಿನಾಂಕ |
|---|---|---|---|
| 01 | (i) ಕೋಲಾರ ಪಟ್ಟಣ ಮುನಿಸಿಪಾಲಿಟಿ<br>(ii) ತುಮಕೂರು ಪಟ್ಟಣ ಮುನಿಸಿಪಾಲಿಟಿ<br>(iii) ಹಾಸನ ಪಟ್ಟಣ ಮುನಿಸಿಪಾಲಿಟಿ<br>(iv) ಸಂಡೂರು ಪಟ್ಟಣ ಮುನಿಸಿಪಾಲಿಟಿ | 01.06.1978 | ಹೆಚ್‌ಡಿ 06 ಎಸ್‌ಎಫ್‌ಬಿ 78, ದಿ:26.5.78 |
| 02 | ಮಂಡ್ಯ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 03.02.1983 | ಹೆಚ್‌ಡಿ 122 ಎಸ್‌ಎಫ್‌ಬಿ 84, ದಿ:27.6.84 |
| 03 | ಕುಶಾಲನಗರ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 22.08.1989 | ಹೆಚ್‌ಡಿ 187 ಎಸ್‌ಎಫ್‌ಬಿ 89, ದಿ:14.9.89 |
| 04 | ಚಳ್ಳಕೆರೆ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 22.06.1992 | ಹೆಚ್‌ಡಿ 104 ಎಸ್‌ಎಫ್‌ಬಿ 92, ದಿ:22.6.92 |
| 05 | ಚನ್ನರಾಯಪಟ್ಟಣ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 24.06.1992 | ಹೆಚ್‌ಡಿ 137 ಎಸ್‌ಎಫ್‌ಬಿ 92, ದಿ:24.6.92 |
| 06 | ಕುಂದಾಪುರ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 24.06.1992 | ಹೆಚ್‌ಡಿ 136 ಎಸ್‌ಎಫ್‌ಬಿ 92, ದಿ:24.6.92 |

| | | | |
|---|---|---|---|
| 07 | ಹರಪನಹಳ್ಳಿ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 21.11.1992 | ಹೆಚ್‌ಡಿ 211 ಎಸ್‌ಎಫ್‌ಬಿ 92, ದಿ:21.11.92 |
| 08 | ಸಿಂಧನೂರು ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 05.12.1992 | ಹೆಚ್‌ಡಿ 247 ಎಸ್‌ಎಫ್‌ಬಿ 92, ದಿ:05.12.92 |
| 09 | ಭದ್ರಾವತಿ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 15.12.1993 | ಹೆಚ್‌ಡಿ 108 ಕಅಸೇ 93, ದಿ:15.12.93 |
| 10 | ಸಾಗರ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 15.12.1993 | ಹೆಚ್‌ಡಿ 91 ಕಅಸೇ 93, ದಿ:15.12.1993 |
| 11 | ಚಿಕ್ಕೋಡಿ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 15.12.1993 | ಹೆಚ್‌ಡಿ 271 ಕಅಸೇ 93, ದಿ:15.12.1993 |
| 12 | ಮಡಕೇರಿ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 15.12.1993 | ಹೆಚ್‌ಡಿ 153 ಕಅಸೇ 93, ದಿ:15.12.1993 |
| 13 | ಹುಮನಾಬಾದ್ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 15.12.1993 | ಹೆಚ್‌ಡಿ 272 ಎಸ್‌ಎಫ್‌ಬಿ 93, ದಿ:15.12.1993 |
| 14 | ಜೇವರ್ಗಿ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 15.12.1993 | ಹೆಚ್‌ಡಿ 90 ಕಅಸೇ 93, ದಿ:15.12.1993 |
| 15 | ಜಮಖಂಡಿ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 20.12.1993 | ಹೆಚ್‌ಡಿ 282 ಎಸ್‌ಎಫ್‌ಬಿ 93, ದಿ:20.12.1993 |
| 16 | ಸಿರಸಿ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 25.03.1994 | ಹೆಚ್‌ಡಿ 72 ಕಅಸೇ 94, ದಿ:25.03.1994 |
| 17 | ಶಿರಾ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 | 25.03.1994 | ಹೆಚ್‌ಡಿ 72 ಕಅಸೇ 94, ದಿ:25.03.1994 |

| | | | |
|---|---|---|---|
| | ಕಿ.ಮೀ. ವ್ಯಾಪ್ತಿ ಪ್ರದೇಶ. | | |
| 18 | ಶಿರಾ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 29.07.1994 | ಹೆಚ್‌ಡಿ 144 ಕಅಸೇ 94, ದಿ:29.07.1994 |
| 19 | ಬೈಲಹೊಂಗಲ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 29.07.1994 | ಹೆಚ್‌ಡಿ 47 ಕಅಸೇ 94, ದಿ:29.07.1994 |
| 20 | ಚಿಕ್ಕಬಳ್ಳಾಪುರ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 04.10.1996 | ಹೆಚ್‌ಡಿ 193 ಕಅಸೇ 96, ದಿ:04.10.1996 |
| 21 | ಕನಕಪುರ ಪಟ್ಟಣ ಮುನಿಸಿಪಾಲಿಟಿ ಮತ್ತು ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ. | 08.11.1996 | ಹೆಚ್‌ಡಿ 180 ಕಅಸೇ 96, ದಿ:04.10.1996 |
| 22 | ಹೊಳೆನರಸಿಪುರ ಪಟ್ಟಣ ಮುನಿಸಿಪಾಲಿಟಿ | 16.11.1996 | ಹೆಚ್‌ಡಿ 163 ಕಅಸೇ 97, ದಿ.12.01.98 |
| 23 | ಕೂಡ್ಲಗಿ ಪಟ್ಟಣ ಮುನಿಸಿಪಾಲಿಟಿ | 08.12.1996 | ಹೆಚ್‌ಡಿ 163 ಕಅಸೇ 97, ದಿ.12.01.98 |
| 24 | ಕುಕನೂರು ಪಟ್ಟಣ ಮುನಿಸಿಪಾಲಿಟಿ | 11.12.1996 | ಹೆಚ್‌ಡಿ 163 ಕಅಸೇ 97, ದಿ.12.01.98 |
| 25 | ಹುಣಸೂರು ಪಟ್ಟಣ ಮುನಿಸಿಪಾಲಿಟಿ | 16.11.1996 | ಹೆಚ್‌ಡಿ 163 ಕಅಸೇ 97, ದಿ.12.01.98 |
| 26 | ಸಿರಗುಪ್ಪ ಪಟ್ಟಣ ಮುನಿಸಿಪಾಲಿಟಿ | 06.01.1997 | ಹೆಚ್‌ಡಿ 163 ಕಅಸೇ 97, ದಿ.12.01.98 |
| 27 | ಸವದತ್ತಿ ಪಟ್ಟಣ ಮುನಿಸಿಪಾಲಿಟಿ | 12.01.1997 | ಹೆಚ್‌ಡಿ 163 ಕಅಸೇ 97, ದಿ.12.01.98 |
| 28 | ಹೂವಿನಡಗಲಿ ಪಟ್ಟಣ ಮುನಿಸಿಪಾಲಿಟಿ | 12.01.1997 | ಹೆಚ್‌ಡಿ 163 ಕಅಸೇ 97, ದಿ.12.01.98 |
| 29 | ಚಿಂತಾಮಣಿ ಪಟ್ಟಣ ಮುನಿಸಿಪಾಲಿಟಿ | 24.01.1997 | ಹೆಚ್‌ಡಿ 163 ಕಅಸೇ 97, ದಿ.12.01.98 |
| 30 | ಮೂಡಬಿದರೆ ಪಟ್ಟಣ ಮುನಿಸಿಪಾಲಿಟಿ | 3.3.1997 | ಹೆಚ್‌ಡಿ 163 ಕಅಸೇ 97, ದಿ.12.01.98 |
| 31 | ಗುಂಡ್ಲುಪೇಟೆ ಪಟ್ಟಣ ಮುನಿಸಿಪಾಲಿಟಿ | 13.3.1997 | ಹೆಚ್‌ಡಿ 163 ಕಅಸೇ 97, ದಿ.12.01.98 |
| 32 | ಮಳವಳ್ಳಿ ಪಟ್ಟಣ ಮುನಿಸಿಪಾಲಿಟಿ | 16.02.1997 | ಹೆಚ್‌ಡಿ 163 ಕಅಸೇ 97, ದಿ.12.01.98 |
| 33 | ಅಥಣಿ ಪಟ್ಟಣ ಮುನಿಸಿಪಾಲಿಟಿ | 28.04.1997 | ಹೆಚ್‌ಡಿ 163 ಕಅಸೇ 97, ದಿ.12.01.98 |
| 34 | ಆಳಂದ ಪಟ್ಟಣ ಮುನಿಸಿಪಾಲಿಟಿ | 01.05.1997 | ಹೆಚ್‌ಡಿ 163 ಕಅಸೇ 97, ದಿ.12.01.98 |
| 35 | ಲಿಂಗಸೂರು ಪಟ್ಟಣ ಮುನಿಸಿಪಾಲಿಟಿ | 21.09.1998 | ಹೆಚ್‌ಡಿ 136 ಕಅಸೇ 98, ದಿ.21.09.98 |

| | | | |
|---|---|---|---|
| 36 | ಹಿರಿಯೂರು ಪಟ್ಟಣ ಮುನಿಸಿಪಾಲಿಟಿ | 04.10.1998 | ಹೆಚ್‌ಡಿ 199 ಕಅಸೇ 99, ದಿ.04.10.98 |
| 37 | ಕೊಪ್ಪಳ ಪಟ್ಟಣ ಮುನಿಸಿಪಾಲಿಟಿ | 10.11.1998 | ಹೆಚ್‌ಡಿ 24 ಕಅಸೇ 99, ದಿ.21.09.98 |
| 38 | ಹರಿಹರ ಪಟ್ಟಣ ಮುನಿಸಿಪಾಲಿಟಿ | 03.11.1998 | ಹೆಚ್‌ಡಿ 136 ಕಅಸೇ 98, ದಿ.21.09.98 |
| 39 | ಹಾನಗಲ್ ಪಟ್ಟಣ ಮುನಿಸಿಪಾಲಿಟಿ | 03.11.1998 | ಹೆಚ್‌ಡಿ 136 ಕಅಸೇ 98, ದಿ.21.09.98 |
| 40 | ಕುಣಿಗಲ್ ಪಟ್ಟಣ ಮುನಿಸಿಪಾಲಿಟಿ | 09.01.1998 | ಹೆಚ್‌ಡಿ 136 ಕಅಸೇ 98, ದಿ.21.09.98 |
| 41 | ಸೊರಬ ಪಟ್ಟಣ ಮುನಿಸಿಪಾಲಿಟಿ | 15.12.1998 | ಹೆಚ್‌ಡಿ 136 ಕಅಸೇ 98, ದಿ.21.09.98 |
| 42 | ಸಂಕೇಶ್ವರ ಪಟ್ಟಣ ಮುನಿಸಿಪಾಲಿಟಿ | 04.01.1999 | ಹೆಚ್‌ಡಿ 136 ಕಅಸೇ 98, ದಿ.21.09.98 |
| 43 | ಸದಲಗ ಪಟ್ಟಣ ಮುನಿಸಿಪಾಲಿಟಿ | 04.01.1999 | ಹೆಚ್‌ಡಿ 136 ಕಅಸೇ 98, ದಿ.21.09.98 |
| 44 | ಮುಂಡರಗಿ ಪಟ್ಟಣ ಮುನಿಸಿಪಾಲಿಟಿ ಮತ್ತು ಕ್ರ.ಸಂ. 37 ರಿಂದ 44ರ ವರೆಗೆ ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ | 19.09.1999 | ಹೆಚ್‌ಡಿ 136 ಕಅಸೇ 98, ದಿ.21.09.98 |
| 45 | ಕೆ.ಜಿ.ಎಫ್ ಪಟ್ಟಣ ಮುನಿಸಿಪಾಲಿಟಿ | 12.02.1999 | ಹೆಚ್‌ಡಿ 147 ಕಅಸೇ 99, ದಿ.23.07.99 |
| 46 | ಹೊನ್ನಾಳಿ ಪಟ್ಟಣ ಮುನಿಸಿಪಾಲಿಟಿ | 17.05.1999 | ಹೆಚ್‌ಡಿ 147 ಕಅಸೇ 99, ದಿ.23.07.99 |
| 47 | ನಂಜನಗೂಡು ಪಟ್ಟಣ ಮುನಿಸಿಪಾಲಿಟಿ ಮತ್ತು ಕ್ರ.ಸಂ. 45 ರಿಂದ 47ರ ವರೆಗೆ ಸದರಿ ಪಟ್ಟಣ ಮುನಿಸಿಪಾಲಿಟಿಯ ಮಿತಿಯ 40 ಕಿ.ಮೀ. ವ್ಯಾಪ್ತಿ ಪ್ರದೇಶ | 19.06.1999 | ಹೆಚ್‌ಡಿ 147 ಕಅಸೇ 99, ದಿ.23.07.99 |
| 48 | ಕನಕಪುರ ಪಟ್ಟಣ ಬೆಂಗಳೂರು ಗ್ರಾ.ಜಿಲ್ಲೆ 40 ಕಿ.ಮೀ. ವ್ಯಾಪ್ತಿ | 28.11.1998 | ಒಇ 180 ಕಅಸ 98, 28.11.1998 |

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 104 ಕಅಸೇ 2002, ದಿ:23.05.2002

| **ಕ್ರಮ ಸಂಖ್ಯೆ** | **ಜಿಲ್ಲೆ** | **ಹೊಸದಾಗಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಿರುವ ಸ್ಥಳ** | **ಕಾರ್ಯ ನಿರ್ವಹಿಸುತ್ತಿರುವ ಕಟ್ಟಡದ ವಿಳಾಸ** | **ಪ್ರಾರಂಭಿಸಿದ ದಿನಾಂಕ** |
|---|---|---|---|---|
| 1. | ಚಿತ್ರದುರ್ಗ | ಹೊಸದುರ್ಗ | ಹೊಸದುರ್ಗ ಅಗ್ನಿಶಾಮಕ ಠಾಣೆ ರೈತ ಭವನ, ಎ.ಪಿ.ಎಂ.ಸಿ ಆವರಣ, ಹುಳಿಯೂರ್ ರಸ್ತೆ, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ | 06.10.2001 |

| | | | | |
|---|---|---|---|---|
| 2. | ರಾಯಚೂರು | ಮಾನ್ವಿ | ಮಾನ್ವಿ ಅಗ್ನಿಶಾಮಕ ಠಾಣೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಾನ್ವಿ, ರಾಯಚೂರು ಜಿಲ್ಲೆ | 15.01.2002 |
| 3. | ಗದಗ | ರೋಣ | ರೋಣ ಅಗ್ನಿಶಾಮಕ ಠಾಣೆ ಎಂ.ಆರ್.ಬಿ.ಸಿ. ಆವರಣ ರೋಣ, ಗದಗ ಜಿಲ್ಲೆ | 05.03.2002 |

2. ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 104 ಕಅಸೇ 2001, ದಿ:23.05.2002

| **ಕ್ರಮ ಸಂಖ್ಯೆ** | **ಜಿಲ್ಲೆ** | **ಹೊಸದಾಗಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಿರುವ ಸ್ಥಳ** | **ಕಾರ್ಯ ನಿರ್ವಹಿಸುತ್ತಿರುವ ಕಟ್ಟಡದ ವಿಳಾಸ** | **ಪ್ರಾರಂಭಿಸಿದ ದಿನಾಂಕ** |
|---|---|---|---|---|
| 1. | ಬಿಜಾಪುರ | ಸಿಂದಗಿ | ಹಳೆ ತಾಲ್ಲೂಕು ಪಂಚಾಯತ್ ಕಟ್ಟಡ ಸಿಂಧಗಿ ಪಟ್ಟಣ ಬಿಜಾಪುರ ಜಿಲ್ಲೆ. | 19.12.2002 |
| 2. | ಮೈಸೂರು ನಗರ | ಮೇಟಗಳ್ಳಿ | ಭಾರತೀಯ ರಿಜರ್ವ್ ಬ್ಯಾಂಕ್ ನೋಟು ಮುದ್ರಣ ನಿಯಮಿತ, ನೋಟು ಮುದ್ರಣ ನಗರ ಮೇಟಗಳ್ಳಿ. | 06.05.2000 |

3. ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 215 ಕಅಸೇ 2002, ದಿ:28.01.2004

| **ಕ್ರಮ ಸಂಖ್ಯೆ** | **ಜಿಲ್ಲೆ** | **ಹೊಸದಾಗಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಿರುವ ಸ್ಥಳ** | **ಎಷ್ಟನೇ ಠಾಣೆ** | **ಕಾರ್ಯ ನಿರ್ವಹಿಸುತ್ತಿರುವ ಕಟ್ಟಡದ ವಿಳಾಸ** | **ಪ್ರಾರಂಭಿಸಿದ ದಿನಾಂಕ** |
|---|---|---|---|---|---|
| 1. | ಉತ್ತರ ಕನ್ನಡ | ಹಳಿಯಾಳ | 105 | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮಾನವಿ ಧಾರವಾಡ ರಸ್ತೆ ಹಳಿಯಾಳ-581329 | 24.11.2002 |
| 2. | ಚಿಕ್ಕಮಂಗಳೂರು | ತರೀಕೆರೆ | 106 | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣ ಬಿ.ಹೆಚ್. ರಸ್ತೆ | 21.01.2003 |

| | | | | | |
|---|---|---|---|---|---|
| | | | | ತರಿಕೆರೆ | |
| 3. | ಬಳ್ಳಾರಿ | ಹಗರಿಬೊಮ್ಮನಹಳ್ಳಿ | 107 | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣ ಹಗರಿ ಬೊಮ್ಮನಹಳ್ಳಿ | 12.04.2003 |
| 4. | ತುಮಕೂರು | ಪಾವಗಡ | 108 | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣ ಪಾವಗಡ | 07.07.2003 |
| 5. | ಬೀದರ್ | ಬಸವಕಲ್ಯಾಣ | 109 | ಕಲ್ಯಾಣ ಮಂಟಪ ಕಟ್ಟಡ ಲೋಕೋಪಯೋಗಿ ಇಲಾಖೆ ಆವರಣ ಬಸವ ಕಲ್ಯಾಣ | 13.10.2003 |

## 2023 ರ ಕರ್ನಾಟಕ ಅಧಿನಿಯಮ ಸಂಖ್ಯೆ: 24

(2023ರ ಜುಲೈ ತಿಂಗಳ 27ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧಿನಿಯಮ, 2023

(2023 ರ ಜುಲೈ ತಿಂಗಳ 27ನೇ ದಿನಾಂಕದಂದು ರಾಜ್ಯ ಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42)ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು 24ನೇ ಮಾರ್ಚ್ 2023ರಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. 13ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42)ರ 13ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3) ಎತ್ತರದ ಕಟ್ಟಡವನ್ನು ನಿರ್ಮಾಣ ಮಾಡಲು ಉದ್ದೇಶಿಸುವ ಯಾರೇ ವ್ಯಕ್ತಿಯು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು.

(4) ಅಗ್ನಿಶಾಮಕ ಮತ್ತು ಜೀವ ಸುರಕ್ಷತೆಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಕಟ್ಟಡ ಸಂಹಿತೆ, 2016ರ ಉಪಬಂಧಗಳಿಗೆ ಒಳಪಟ್ಟು ಎತ್ತರದ ಕಟ್ಟಡಗಳ ನಿರ್ಮಾಣಕ್ಕಾಗಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ನಿರಾಕ್ಷೇಪಣಾ ಪತ್ರವನ್ನು ನೀಡುವಾಗ, ಅದು ನಿಯಮಿಸಬಹುದಾದಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು ಮತ್ತು ಅಂಥ ಶುಲ್ಕವನ್ನು ಸಂಗ್ರಹಿಸತಕ್ಕದ್ದು.

**ವಿವರಣೆ:** "ಎತ್ತರದ ಕಟ್ಟಡ" ಎಂದರೆ ರಾಷ್ಟ್ರೀಯ ಕಟ್ಟಡ ಸಂಹಿತೆ, 2016ರಲ್ಲಿ ಪರಿಭಾಷಿಸಿದಂತೆ ಅದರ ಅಧಿಭೋಗದಾರಿಕೆಯನ್ನು ಲೆಕ್ಕಿಸದೆ 21 ಮೀಟರುಗಳ ಅಥವಾ ಅದಕ್ಕಿಂತ ಹೆಚ್ಚಿನ ಎತ್ತರದ ಕಟ್ಟಡ."

**3. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧ್ಯಾದೇಶ, 2023 (2023ರ ಕರ್ನಾಟಕ ಅಧ್ಯಾದೇಶ ಸಂ. 01)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

The above translation of the Karnataka Fire Force (Amendment) Act, 2023 (Karnataka Act No. 24 of 2023) shall be authoratitive text in Kannda language under section 5-A of the Karnataka Official Language Act, 1963 (Karnataka Act 26 of 1963).

**ಥಾವರ್‌ಚಂದ್ ಗೆಹ್ಲೋಟ್**

ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ,

**ಜಿ.ಶ್ರೀಧರ್**

ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು

ಶಾಸನ ರಚನೆ ಇಲಾಖೆ.

## 2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 59

(2025 ರ ಸೆಪ್ಟೆಂಬರ್ ತಿಂಗಳ 10ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧಿನಿಯಮ, 2025

(2025 ರ ಸೆಪ್ಟೆಂಬರ್ ತಿಂಗಳ10ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 42), ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಸರ್ಕಾರಿ ರಾಜ್ಯಪತ್ರದಲ್ಲಿ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪ್ರಕರಣ 15ರ ತಿದ್ದುಪಡಿ.-** ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42)ರ, 15ನೇ ಪ್ರಕರಣದ, (2)ನೇ ಉಪಪ್ರಕರಣದ ತರುವಾಯ, ಈ ಮುಂದಿನ ಪರಂತುಕಗಳನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಸದರಿ ಅಧಿನಿಯಮದ 13ನೇ ಪ್ರಕರಣದಲ್ಲಿ ಪರಿಭಾಷಿಸಿರುವಂತೆ ಹೊಸದಾಗಿ ನಿರ್ಮಾಣಗೊಂಡಿರುವ ಬಹುಮಹಡಿ ಕಟ್ಟಡಗಳ(ಎತ್ತರವಾದ ಕಟ್ಟಡಗಳ) ಮೇಲೆ ಸ್ವತ್ತು ತೆರಿಗೆಯ ಶೇಕಡಾ ಒಂದರಷ್ಟು ದರದಲ್ಲಿನ ಅಧಿಭಾರದ (Surcharge) ರೂಪದಲ್ಲಿ, ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧಿನಿಯಮ, 2025ರ ಪ್ರಾರಂಭದ ದಿನಾಂಕದಿಂದ ಜಾರಿಗೆ ಬರುವಂತೆ ಬೆಂಕಿ ಉಪಕರವನ್ನು ವಿಧಿಸತಕ್ಕದ್ದು:

ಮತ್ತು ಪರಂತು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಯಾವುದೇ ಸಾರ್ವಜನಿಕ ಪ್ರಾಧಿಕಾರದ ನಿಯಂತ್ರಣ ಅಥವಾ ಸ್ವಾಧೀನದಡಿಯಲ್ಲಿರುವ ಯಾವುದೇ ಕಟ್ಟಡದ ಮೇಲೆ ಬೆಂಕಿ ಉಪಕರವನ್ನು ವಿಧಿಸತಕ್ಕದ್ದಲ್ಲ."

The above translation of the Karnataka Fire Force (Amendment) Act, 2025 (Karnataka Act 59 of 2025) shall be an authoritative text in Kannada language under section 6 of the Kannada Language Comprehensive Development Act, 2022 (Karnataka Act No. 13 of 2023).

**ಥಾವರ್‌ಚಂದ್ ಗೆಹ್ಲೋಟ್**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ

ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.